63

ಡಾಕ್ಟರ್ ಆರೋಗ್ಯಮ್

(ರಾಜಾಜಿಯವರ ಕಥೆ)

ಮೂಲಲೇಖಕರು:

ಚಕ್ರವರ್ತಿ ಶ್ರೀ| ರಾಜಗೋಪಾಲಾಚಾರ್.

ಅನುವಾದಕರು:

ಶ್ರೀ| ಕೆ. ಎನ್. ಭಟ್, ಶಿರಾಡಿಪಾಲ್.

1955.

ಒಂದಾಣೆ ಮಾಲೆ

ಒಂದಾಣೆ ಮಾಲೆಯಲ್ಲಿ ಈ ವರೆಗೆ ಪ್ರಕಟವಾದ ಪುಸ್ತಕಗಳು

೧. *ಕೆಪ್ಪಟಿರಾಯ (ವಿನೋದ ಕಥೆ)
೨. *ನಾರೀಶ್ವರರು (ಏಕಾಂಕ ಪ್ರಹಸನ)
೩. *ಕಳ್ಳನಿಗೆ ಸಂಭಾವನೆ ಮತ್ತು ಇತರ ಕಥೆಗಳು.
೪. *ಸದ್ರಿಸುಬ್ಬ (ಏಕಾಂಕ ಪ್ರಹಸನ)
೫. *ಅದ್ಭುತತ್ಯಾಗ ಮತ್ತು ಇತರ ಕಥೆಗಳು
೬. ಚುನಾವಣೆ ಅರ್ಥಾತ್ ಬನಾವಣೆ (ಏಕಾಂಕ ಪ್ರಹಸನ)
೭. *'ಬೀಡಿ ಸೇದಬೇಡಿ' ಮತ್ತು 'ಆ ಮಗು' (ವಿನೋದ ಕಥೆಗಳು)
೮. *ಇಂಗ್ಲಿಷ್-ಕನ್ನಡ ಅರ್ಥಕೋಶ
೯. *ಲಂಚಕ್ಕೆ ಸಂಚಕಾರ
೧೦. *ಟಿಶ್ಯೂ ಔಷಧಿಗಳ ಕೈಪಿಡಿ.
೧೧. ಶ್ರೀಕ್ಷೇತ್ರ ಧರ್ಮಸ್ಥಳ (ತೃ. ಮುದ್ರಣ)
೧೨. ಜೀವದ ಮೌಲ್ಯ ಮತ್ತು ಇತರ ಕಥೆಗಳು
೧೩. ಸತ್ತವನ ಸೇಡು ಮತ್ತು ಇತರ ಕಥೆಗಳು
೧೪. ವೆಂಕಟನ ಸಂಕಟ (ಏಕಾಂಕ ಪ್ರಹಸನ)
೧೫. ಬಾಬಿಗೆ ಬಾಸಿಂಗ (ಏಕಾಂಕ ಪ್ರಹಸನ)
೧೬. ವೇಣೂರಿನ ಗತವೈಭವ.
೧೭. ಒಗಟುಗಳು [ದ್ವಿತೀಯ ಮುದ್ರಣ]
೧೮. ಜಗಳಗಂಟಿ ಮತ್ತು ಇತರ ಕಥೆಗಳು
೧೯. ರಥೋತ್ಸವ.
೨೦. ಕರಿನಾಯಿ ಮತ್ತು ಮುಪ್ಪು
೨೧. *ಭಾರತದ ಮಹಾನಗರಗಳು (ಭಾಗ ೧)
೨೨. ತಿರುಕ್ಕುರಲ್
೨೩. ಸೂರ್ಯನ ಸಂಸಾರ ಮತ್ತು ಇತರ ಕಥೆಗಳು.
೨೪. *ಭಾರತದ ಮಹಾನಗರಗಳು (ಭಾಗ ೨)
೨೫. ಧೈರ್ಯ ಮತ್ತು ಇತರ ಸತ್ಯಕಥೆಗಳು
೨೬. *ಮಾರಾವತಾರ (ಏಕಪಾತ್ರ ಯಕ್ಷಗಾನ ಪ್ರಬಂಧ)
೨೭. ಹಾಸವಿಲಾಸ (ನಗೆಹನಿಗಳು)
೨೮. ಸತ್ಯವಂತ ಬಾಜಿ (ಏಕಾಂಕ ಪ್ರಹಸನ)
೨೯. ಜಾಣ್ಮೆಯ ಒಗಟುಗಳು
೩೦. ಜಾತಕ ಕಥೆಗಳು
೩೧. ಕಾರ್ಕಳದ ಚರಿತ್ರೆ
೩೨. ಮರ್ಜಿ (ಏಕಾಂಕ ಪ್ರಹಸನ)
೩೩. ದರ್ಶನದ ಕಥೆಗಳು
೩೪. ಆಳುವಿನ ಹೊಳೆ ಮತ್ತು ಕೇಶವಭೂಪ (ಮಕ್ಕಳ ಕಥೆಗಳು)
೩೫. ಶರಾಬಿನ ಸಿಪಾಯಿಗಳು
೩೬. ಉಪದೇಶ ಶತಕ
೩೭. ನಿಮಗೆ ಗೊತ್ತಿದೆಯೇ?
೩೮. ಚತುರ ಚಮತ್ಕಾರ
೩೯. ಸತೀ ಸಾವಿತ್ರಿ
೪೦. ಆಭರಣಗಳ ಪೆಟ್ಟಿಗೆ, ಮತ್ತು ಇತರ [ಕಥೆಗಳು
೪೧. ಭಾರತದ ಮಂತ್ರಿಮಂಡಲಗಳು (ದ್ವಿ.
೪೨. ಕಾಲುಬಳೆಯ ಕಥೆ [ಮುದ್ರಣ)
೪೩. ಭಾರತದ ನಾಲ್ಕು ಕಲಶಗಳು
೪೪. ವ್ಯಸನದಿಂದ ಲಾಭ ಮತ್ತು ಇತರ
೪೫. ಸುಭಾಷಿತ [ಕಥೆಗಳು
೪೬. ೧೮೫೭ರ "ಸಿಪಾಯಿ ದಂಗೆ"
೪೭. ಅಕಾಂಡ ತಾಂಡವ (ರೇಡಿಯೋ ನಾಟಕ)
೪೮. ಸಾಹಸದ ಕಥೆಗಳು
೪೯. ಸಂಜ್ಞಾ ಜ್ಞಾನ ಕೋಶ
೫೦. ಪಂಡಿತನ ಪಿಟೀಲು
೫೧. ಭೋಗಯಾತ್ರೆ
೫೨. ಸಂಗ್ರಾಮಸಿಂಹ
೫೩. ಧರ್ಮ ಶಿಕ್ಷಾ
೫೪. ಮಹಾತ್ಮ
೫೫. ಮೀರಾಬಾಯಿ (ಏಕಾಂಕ ನಾಟಕ)
೫೬. ವೀರರಮಣಿ ಕರ್ಮದೇವಿ
೫೭. ಅರಳಿದ ನಗು
೫೮. ಸಚಿತ್ರ ಜಪಾನ್
೫೯. ಚುಟ್ಟ ಬಿಟ್ಟ ಧಿಟ್ಟ (ಏಕಾಂಕ ಪ್ರಹಸನ)
೬೦. ನಿರಪರಾಧಿ
೬೧. ಭಕ್ತ ವಾಣಿ
೬೨. ಜಾನಪದ ಸಾಹಿತ್ಯ
೬೩. ಡಾಕ್ಟರ್ ಆರೋಗ್ಯಮ್

* ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಈ ವರೆಗೆ ಅರುವತ್ತಮೂರು ಪುಸ್ತಕಗಳಲ್ಲಿ, ಅರುವತ್ತಮೂರು ಅಣೆಗಳಿಗೆ, 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, 1372 ಪುಟಗಳನ್ನು ಕೊಟ್ಟಿರುತ್ತದೆ.

ಲೇಖಕನ ಎರಡು ಮಾತು.

ಮಾನ್ಯ ಚಕ್ರವರ್ತಿ ರಾಜಗೋಪಾಲಾಚಾರ್ಯರು, ಭಾರತದ ಪ್ರಥಮ ಮತ್ತು ಕೊನೆಯ ಗವರ್ನರ ಜನರಲರಾಗಿದ್ದವರು. ಅರ್ಧ ಶತಮಾನಕ್ಕೂ ಹೆಚ್ಚಿನ ಕಾಲವನ್ನು—ಈ ವರೆಗೆ—ದೇಶ ಸೇವೆಯಲ್ಲಿ, ಜನತಾ ಸೇವೆಯಲ್ಲಿ ವಿನಿಯೋಗಿಸಿದವರು. ಎರಡು ಬಾರಿ ಮದ್ರಾಸು ರಾಜ್ಯದ ಮುಖ್ಯಮಂತ್ರಿಯಾಗಿದ್ದವರು. ರಾಜತಂತ್ರ ಪ್ರವೀಣರು; ಕುಶಾಗ್ರಮತಿಗಳು; ಭಾರತದ ಮಹಾಗ್ರಂಥಗಳನ್ನೂ, ಜಗತ್ತಿನ ಶ್ರೇಷ್ಠ ಸಾಹಿತಿಗಳ ಮಹಾಕೃತಿಗಳನ್ನೂ ಅಭ್ಯಸಿಸಿದವರು. "ಕಂಬನ್ ರಾಮಾಯಣ"ವನ್ನು ಸುಲಲಿತವಾಗಿ ತಮಿಳಿಗೆ ಭಾಷಾಂತರಿಸಿದವರು. ರಾಮಾಯಣ–ಮಹಾಭಾರತ ಗ್ರಂಥಗಳನ್ನು ಇಂಗ್ಲಿಷಿಗೂ ತರ್ಜುಮೆ ಮಾಡಿದವರು. ಶ್ರೀ ಶಂಕರಾಚಾರ್ಯಕೃತ "ಭಜಗೋವಿಂದಂ" ಸ್ತೋತ್ರದ ವ್ಯಾಖ್ಯಾನಕಾರರೂ ಆಗಿರುವರು.

ಹಲವು ಸಾಮಾಜಿಕ ಕಥೆಗಳನ್ನೂ ಬರೆದು ಪ್ರಸಿದ್ಧರಿರುವರು.

ಅವರ ಕೆಲವು ಗ್ರಂಥಗಳೂ ಸಣ್ಣ ಕತೆಗಳೂ ಅನೇಕ ಭಾಷೆಗಳಿಗೆ ಅನುವಾದಿಸಲ್ಪಟ್ಟಿವೆ. ಅವುಗಳಲ್ಲಿ "ದುಃಖಿತ ಜಗತ್ತು" ಮತ್ತು "ಕುಬ್ಜಾ ಸುಂದರಿ" ಎಂಬ ಎರಡು ಕಥಾಸಂಕಲನಗಳು ಸುಪ್ರಸಿದ್ಧವಾಗಿವೆ.

ರಾಜಾಜಿಯವರ ಕಥೆಗಳಲ್ಲಿ ವಿನೋದವಿದೆ; ನೀತಿಯೂ ಬೆರೆತಿದೆ. ಅವರ ಕಥಾತಂತ್ರವು ಮೇಲ್ಮಟ್ಟದ್ದು. ಅವರ ಕಥಾಸಂಗ್ರಹದಿಂದ ಒಂದನ್ನು ಅನುವಾದಿಸಿ, ಕನ್ನಡಿಗರ ಮುಂದಿರಿಸಿರುವೆನು.*

ಮುಖ್ಯಮಂತ್ರಿ ಪದವಿಯಿಂದ ನಿವೃತ್ತರಾದ,— ವಯೋವೃದ್ಧರೂ ಜ್ಞಾನವೃದ್ಧರೂ ಆಗಿರುವ ಪೂಜ್ಯ ರಾಜಾಜಿಯವರು, ಎಪ್ಪತ್ತಾರರ ಗಡಿ ದಾಟುತ್ತಿರುವರಾದರೂ, ಕರ್ಮಯೋಗಿಯಾಗಿಯೇ ಇದ್ದು, ಸದಾ ಸಾರ್ವಜನಿಕ ಸೇವೆಗೇ ತಮ್ಮನ್ನರ್ಪಿಸಿಕೊಂಡಿರುವರು. ಮಾನ್ಯರಾದ ಅವರಿಂದ, ಜನತೆಗೆ ಇನ್ನೂ ಬಹುಕಾಲ ಮಾರ್ಗದರ್ಶನ ಲಭಿಸುವಂತೆ ಪರಮಾತ್ಮನು ಅನುಗ್ರಹಿಸಲಿ!

—ಲೇಖಕ.

---

*ರಾಜಾಜಿಯವರ "ನಿರಪರಾಧಿ" ಎಂಬ ಕಥೆಯು 'ಒಂದಾಣೆ ಮಾಲೆ'ಯಲ್ಲಿ ಈ ಮೊದಲು, ೬ನೇ ಪುಸ್ತಕವಾಗಿ ಪ್ರಕಟವಾಗಿದೆ.

ಡಾಕ್ಟರ್ ಆರೋಗ್ಯಮ್

ಸಾಹುಕಾರ್ ಸೇಠ್ ಬನ್ಸಿಲಾಲರು ಕೆಂಗಣ್ಣುಗಳನ್ನರಳಿಸಿಕೊಂಡು ದುರದುರನೆ ನೋಡುತ್ತ ಹೊರಗೆ ಬಂದರು. ಅವರೆದುರಿಗೇ ನಿಂತುಕೊಂಡಿದ್ದ ಡಾಕ್ಟರ್ ಆರೋಗ್ಯಮ್‌ರವರು ಭಯಭೀತರಾದವರಂತೆ ತಲೆತಗ್ಗಿಸಿದರು. "ಇನ್ನು ಒಂದೇ ಒಂದು ದಿನದ ಮಟ್ಟಿಗೂ ಅವಕಾಶಕೊಡಲಾರೆ" ಸೇಠಜೀಯವರು ಕೋಪಗೊಂಡು ಗರ್ಜಿಸಿದರು.

"ಸ್ವಾಮೀ! ತಮಗಾಗಿ ನಾನು ಎಷ್ಟೋ ಕಷ್ಟಪಟ್ಟಿದ್ದೇನೆ; ಅನುಭವಿಸಿದ್ದೇನೆ. ಹೀಗಿರುವಾಗ ಒಂದೇ ಗಂಟಿನಿಂದ ಸಾವಿರಾರು ರೂಪಾಯಿಗಳನ್ನು ಕೊಡುವುದೆಂದರೆ ನಾನು ಎಲ್ಲಿಂದ ತಂದುಕೊಡಲಿ?'' ಡಾ| ಆರೋಗ್ಯಂರವರು ದೈನ್ಯತೆಯೊಡನೆ ಹೇಳಿದರು; ಪಶ್ಚಾತ್ತಾಪದೊಡನೆ ಮತ್ತೂ ಹೇಳತೊಡಗಿದರು—"ಅಯ್ಯೋ! ನಾನೇಕೆ ಮೋಸಹೋದೆ! ನನ್ನ ಬುದ್ಧಿಯೇಕೆ ತಿರುಗಿತು? ಅಜ್ಞಾನವಶಾತ್ ಇಂತಹ ದುಷ್ಕಾರ್ಯದಲ್ಲಿ ಎಡವಿಬಿದ್ದೆ; ತಾವು ದೊಡ್ಡ ಮನಸ್ಸು ಮಾಡಿ ಕರುಣೆಗೊಂಡು ನನ್ನನ್ನು ಈ ಒಂದು ಬಾರಿಗೆ—ಕ್ಷಮಿಸಬೇಕು. ಪರಮಾತ್ಮನು ತಮಗೇನೂ ಕಡಿಮೆಮಾಡಿಲ್ಲ. ದೈವಾನುಗ್ರಹದಿಂದ ತಾವು ಲಕ್ಷಾಧಿಪತಿಗಳಾಗಿರುವಿರಿ. ನನ್ನ ಮೇಲೆ ದಯೆ ತೋರಬೇಕು ತಾವು ಮನಸ್ಸು ಮಾಡಿದರೆ, ಇದೇನು ತಮಗೆ ದೊಡ್ಡ ವಿಷಯವಲ್ಲ.'' ಗದ್ಗದಿತರಾಗಿ ಹೀಗೆ ಕೇಳಿಕೊಳ್ಳುತ್ತಿದ್ದ ಡಾ| ಆರೋಗ್ಯಂರವರಿಗೆ ಕಣ್ಣುಕತ್ತಲೆ ಬಂದಂತಾಯಿತು. ಕಣ್ಣೀರು ತೊಟ್ಟಿಕ್ಕಿತು.

"ದೇವರಂತೆ, ದೈವವಂತೆ! ಅದೆಲ್ಲ ನನ್ನಲ್ಲಿ ಹೇಳಬೇಡಿ!'' ಎಂದೆನ್ನುತ್ತ ಸೇಠಜೀಯವರು ತೀಕ್ಷ್ಣಸ್ವರದಿಂದ ಗುಡುಗಿದರು: "ನನ್ನನ್ನು ಈ ರೀತಿಯಿಂದ ವಂಚಿಸಿ ವಿಶ್ವಾಸಘಾತ ಮಾಡುವಾಗ ಆ ನಿಮ್ಮ ಪರಮಾತ್ಮನು ಎಲ್ಲಿದ್ದನು? ಈಗ ಒಂದು ವರ್ಷದಿಂದಲೂ ಸತ್ಯವನ್ನು ಬಚ್ಚಿಟ್ಟು ಸುಳ್ಳಿನ ಕಂತೆಗಳನ್ನೇ ಜೋಡಿಸಿ, ಬೊಗಳುತ್ತಾ ನನ್ನ ಹಣವನ್ನು ಮೋಸದಿಂದ ಅಪಹರಿಸಿದ್ದೀರಿ. ಛೀ, ಈಗ ಪರಮಾತ್ಮನ ಹೆಸರನ್ನೆತ್ತಲು ನಿಮಗೆ ನಾಲಿಗೆ ಯೇಳುತ್ತಿದೆಯಲ್ಲ! ಮಾನವಿಲ್ಲ, ಮರ್ಯಾದೆಯಿಲ್ಲ! ಈ ನಿಮ್ಮ ಮೋಸ

ವಂಚನೆಗಳ–ದ್ರೋಹಕ್ಕಾಗಿ ಐದು ವರ್ಷಗಳ ಕಾಲ ಕಾರಾಗೃಹದಲ್ಲಿ ಸುಖವಾಗಿದ್ದುಕೊಂಡು, ಆ ನಿಮ್ಮ ಪರಮಾತ್ಮನನ್ನು ಪೂಜಿಸಿರಿ. ನಿಮಗೆ ಎಷ್ಟೋ ಸಲ ಸಾರಿ ಹೇಳಿದ್ದೇನೆ. ಎಚ್ಚರಿಕೆ! ಇದೊ, ಇದೀಗ ಕೊನೆಯ ಬಾರಿ ಹೇಳುತ್ತಿದ್ದೇನೆ; ಬರುವ ಶುಕ್ರವಾರ ಸಂಧ್ಯಾಕಾಲದೊಳಗೆ ನನ್ನ ಹಣವನ್ನು ಪೂರ್ತಿಯಾಗಿ ಸಂದಾಯಮಾಡಬೇಕು. ಇದಕ್ಕೆ ತಪ್ಪಿದರೆ, ಪೋಲೀಸಿನವರಿಂದ ತಕ್ಕ ಶಾಸ್ತಿ ಮಾಡಿಸಿಬಿಟ್ಟೇನು! ಜಾಗ್ರತೆ!'' ಎಂದೆನ್ನುತ್ತ ಸೇಠಜೀಯವರು ಹೊರಗೆ ಹೊರಟುಹೋದರು.

ಡಾಕ್ಟರ್ ಆರೋಗ್ಯಂರವರಿಗೆ ಅವರ ತಂದೆ ತಾಯಿಂದಿರು ಇರಿಸಿದ ಚಿಕ್ಕಂದಿನ ಹೆಸರು ವೈದ್ಯನಾಥನ್ ಎಂದು. ಆದರೆ, ಅವರು ವ್ಯಾಸಂಗ ಮಾಡುತ್ತಿದ್ದ ಈಸಾಯೀ ಶಾಲೆಯಲ್ಲಿ ಅಲ್ಲಿಯ ಪಾದರಿಗಳೊಬ್ಬರು, ಆ ಹೆಸರಿನಲ್ಲಿ ಸ್ವಲ್ಪ ಅದಲು ಬದಲು ಮಾಡಿದ್ದರು. ಮೂಲನಾಮಕ್ಕೆ ವಿರೋಧವಾಗದಂತೆ, ಎರಡನ್ನು ಸ್ವಲ್ಪ ಸ್ವಲ್ಪ ಸೇರಿಸಿ "ಪಾಲ್ ಆರೋಗ್ಯಂ" ಎಂಬ ಹೆಸರನ್ನಿಟ್ಟು ಹೊಸದಾಗಿ ನಾಮಕರಣ ಮಾಡಿದ್ದರು.

ಡಾ| ಪಾಲ್ ಆರೋಗ್ಯಂರವರು ಕಷ್ಟಪಟ್ಟು ಓದುತ್ತಿದ್ದರೂ ಮೆಟ್ರಿಕ್ ಪರೀಕ್ಷೆಯಲ್ಲಿ ಅವರು ಉತ್ತೀರ್ಣರಾಗಲಿಲ್ಲ. ಕೊನೆಗೆ, ಶಾಲೆಗೆ ಉದ್ದಂಡ ಪ್ರಣಾಮಗಳನ್ನರ್ಪಿಸಿ, ಬೊಂಬಾಯಿ, ಕಲಕತ್ತ, ಢಿಲ್ಲಿ ಮೊದಲಾದ ದೊಡ್ಡ ದೊಡ್ಡ ನಗರಗಳಲ್ಲಿ ನೌಕರಿಗಾಗಿ ಅವರು ಅಲೆದಾಡತೊಡಗಿದರು. ಎಲ್ಲಿಯೂ ಉದ್ಯೋಗ ದೊರೆಯಲಿಲ್ಲ ಆ ಬಳಿಕ ಅಲ್ಲಲ್ಲಿ ತಿರುಗುತ್ತಲಿದ್ದು, ಅವರಿವರಲ್ಲಿ ಅಲ್ಪ ಸ್ವಲ್ಪ ಸೂಕ್ಷ್ಮ ಚಿಕಿತ್ಸೆಯನ್ನವರು ಅಭ್ಯಾಸ ಮಾಡಿಕೊಂಡರು. ಕೆಲವು ಪ್ರಯೋಗಗಳನ್ನೂ (ಹೋಮಿಯೋಪೆಥಿ) ಕಲಿತುಕೊಂಡರು. ಆ ತರುವಾಯ ಕಾಶಿಗೆ ಹೋಗಿ ತಮ್ಮ ಹೊಸ ವೃತ್ತಿಯನ್ನು ಆರಂಭಿಸಿದರು. ಅಂತೂ ಆ ವೈದ್ಯಕೀಯ ವೃತ್ತಿಯಲ್ಲೂ ಅವರಿಗೆ ಸಾಕಾಗುವಷ್ಟು ಸಂಪಾದನೆಯಾಗುತ್ತಿರಲಿಲ್ಲ. ಆದರೂ ಚಾಣಾಕ್ಷರಾದ ಅವರು ಧೈರ್ಯಗೆಡದೆ, ಆ ನಗರದ ಶ್ರೀಮಂತರಲ್ಲೊಬ್ಬರಾದ, ಸಿಲ್ಕ್ ಜವುಳಿ ವ್ಯಾಪಾರಸ್ಥರೊಬ್ಬರ ಪರಿಚಯಮಾಡಿಕೊಂಡರು. ಆ ಪರಿಚಯ ಮುಂದೆ ಚೆನ್ನಾಗಿ ಬೆಳೆದು, ಡಾ| ಪಾಲ್ ಆರೋಗ್ಯಂರವರು ಆ ಜವುಳಿ ವ್ಯಾಪಾರಿಗಳ ಪ್ರತಿನಿಧಿಗಳಾಗಿ ನೇಮಿಸಲ್ಪಟ್ಟು ಕೆಲಸಮಾಡತೊಡಗಿದರು. ಬೆಂಗಳೂರು ಮೈಸೂರುಗಳ ಕಡೆಯಿಂದ ಉತ್ತಮವಾದ ಜವುಳಿಯನ್ನು ತರಿಸಿಕೊಡು

ವುದು, ಹೊಸ ಮಣ್ಣಾಲು ಬಂದೊಡನೆಯೇ ಸ್ವತಃ ಹೋಗಿ ಆರಿಸಿ ವ್ಯಾಪಾರ ಮಾಡುವುದು, ಹಣಕೊಡುವುದು; ಇತ್ಯಾದಿ ಕಾರ್ಯಕ್ರಮಗಳಲ್ಲಿ ಕುಶಲತೆಯಿಂದ ಕೆಲಸಮಾಡತೊಡಗಿದರು. ಇದೇ ರೀತಿಯಲ್ಲಿ ನಾಲ್ಕಾರು ವರ್ಷಗಳ ತನಕ ವ್ಯವಹಾರ ಚೆನ್ನಾಗಿ ನಡೆಯುತ್ತಿರಲು, ಡಾ|| ಪಾಲ್ ಆರೋಗ್ಯಂರವರು "ಸಭ್ಯರು,ವಿಶ್ವಾಸಾರ್ಹರು'' ಎಂಬುದಾಗಿ ಎಲ್ಲರಿಂದಲೂ ಪ್ರಶಂಸಿಸಲ್ಪಟ್ಟರು. ಇದರಿಂದಾಗಿ, ಡಾ|| ಆರೋಗ್ಯಂರವರಿಗೆ, ಸೇಠಜಿಯವರಿಂದ ಜವುಳಿಗಾಗಿ ಪಡಕೊಳ್ಳುತ್ತಿದ್ದ ಹಣವನ್ನು ತಮ್ಮ ಸ್ವಂತ ಸುಖಭೋಗಾದಿ ವಿಲಾಸಗಳಿಗೆ ಖರ್ಚು ಮಾಡಿಕೊಳ್ಳುವ ಸದವಕಾಶವು ಪ್ರಾಪ್ತವಾಯಿತು. ಕೆಲವೇ ತಿಂಗಳುಗಳಲ್ಲಿ ಮೈಸೂರು ಬೆಂಗಳೂರುಗಳ ವ್ಯಾಪಾರಸ್ಥರಲ್ಲಿ ಹಣ ತುಂಬಾ ಬಾಕಿಯಾಗಿ ಉಳಿಯಿತು. ಕಾಲಕ್ರಮೇಣ ಸಾಲದ ಮೊತ್ತ ಮಿತಿ ಮೀರುತ್ತಿರುವಾಗ ವ್ಯಾಪಾರಸ್ಥರ ಹಣದ ತಗಾದೆ ನೋಟೀಸುಗಳು, ಸೇಠ್ ಬನ್ಸಿಲಾಲರಿಗೂ ಬರತೊಡಗಿದವು. ತಮ್ಮ ಪ್ರತಿನಿಧಿಗಳು ಮಾಡುತ್ತಿದ್ದ ಈ ವಂಚನೆಯ ವಿವರಗಳನ್ನೆಲ್ಲ, ಸೇಠ್‌ಜೀಯವರು ಅರಿತುಕೊಂಡರು. ಮತ್ತು ಚಾತುರ್ಯದಿಂದ ತಕ್ಕ ಕಾರ್ಯಕ್ರಮ ಕೈಗೊಳ್ಳಲು ಅವರು ಸಿದ್ಧರಾದರು.

ಬನ್ಸಿಲಾಲ್ ಸೇಠ್‌ಜೀಯವರಿಗೂ, ಅಲ್ಲಿಯ ಪೋಲೀಸಿನವರಿಗೂ ಪರಸ್ಪರ ಚೆನ್ನಾಗಿ ಪರಿಚಯವಿದ್ದಿತು. ಸೇಠ್‌ಜೀಯವರು ಕಾಲಾಯಾಪನೆಗೆ ಅವಕಾಶಕೊಡದೆ, ಪೋಲೀಸು ಮುಖ್ಯಾಧಿಕಾರಿಗಳೊಡನೆ ಈ ಕುರಿತು ಆಲೋಚನೆ ನಡೆಸಿದರು,-"ಮೊಕದ್ದಮೆ ನಡೆಸಿ ಅಪರಾಧಿಯನ್ನು ಕೋರ್ಟಿಗೆಳೆದರೆ, ಹಣ ದೊರೆಯಲಾರದು. ಜೈಲಿಗೆ ಕಳುಹಿಸಬಹುದು ಅಷ್ಟೆ. ಆದುದರಿಂದ ಸಾಧ್ಯವಾದಷ್ಟು ಹೆದರಿಸಿ, ಗದರಿಸಿ, ವಸೂಲು ಮಾಡಿಕೊಳ್ಳುವುದೇ ಸರಿಯಾದ ಉಪಾಯ'' ಎಂಬ ಪೋಲೀಸಿನವರ ಅಭಿಪ್ರಾಯಕ್ಕೆ ತಲೆದೂಗಿದರು. ಪೋಲೀಸು ಮುಖ್ಯಾಧಿಕಾರಿಗಳಗೆ ಸಂತೋಷವಾಯಿತು.

ಬುಧವಾರ ಬೆಳಿಗ್ಗೆ ಮತ್ತು ಸಂಜೆ ಈ ಎರಡು ಹೊತ್ತುಗಳಲ್ಲೂ ಕೂಡ, ಪೋಲೀಸು ಅಧಿಕಾರಿಗಳೊಬ್ಬರು ಡಾ|| ಪಾಲ್ ಆರೋಗ್ಯಂರವರ ಮನೆಯ ಕಡೆಗೆ ಸವಾರಿ ಹೊರಟರು. "ಡಾಕ್ಟರರು ಮನೆಯಲ್ಲಿದ್ದಾರೆಯೆ? ಏನು ಮಾಡುತ್ತಾರೆ?'' ಎಂದು ಮುಂತಾಗಿ ಸ್ವಲ್ಪ ಜಬರ್ದಸ್ತಿನಿಂದಲೇ ವಿಚಾರಿಸಿಕೊಂಡು, ಅವರು ಮರಳಿದ್ದರು. ಸಾಯಂಕಾಲ ಮನೆ ಸೇರಿದ

ಡಾ| ಆರೋಗ್ಯಂರವರಿಗೆ, ಈ ವರ್ತಮಾನ ತಿಳಿದೊಡನೆಯೇ ಜೀವವೇ ಹಾರಿ ಹೋದಂತಾಯಿತು. "ಇನ್ನು ನಾಳೆಯಿಂದ ಜೈಲುವಾಸ ಮಾಡಬೇಕಾಯಿತಲ್ಲ! ದೇವರೇ! ನನ್ನ ಗತಿ ಹೀಗಾಯಿತಲ್ಲ!'' ಎಂದು ಮನದಲ್ಲೇ ಮರುಗುತ್ತ ಚಿಂತಾಕ್ರಾಂತರಾದ ಅವರು, ಆರಾಮಕುರ್ಚಿಯೊಂದರಲ್ಲಿ ಒರಗುತ್ತ ಆಲೋಚನಾಮಗ್ನರಾದರು. ತಮ್ಮ ಜೀವನದ ಹಿಂದಿನ ಸಮಗ್ರ ಚಿತ್ರವೊಂದು ಅವರ ಅಂತಃಚಕ್ಷುಗಳೆದುರು ಮೂಡಿ ಬರುತ್ತಿರುವಂತೆ ತೋರಿತು. ಅವರ ಇಡಿ ಜೀವನವೆಲ್ಲ ಬಹುಕಷ್ಟಕರವಾಗಿ, ದುಃಖಮಯವಾಗಿ ಇದ್ದುದನ್ನು ಸ್ಮರಿಸಿಕೊಂಡ ಅವರಿಗೆ, ಗಂಟಲು ಬಿಗಿದಂತಾಗಿ ದುಃಖವು ಉಕ್ಕಿ ಉಕ್ಕಿ ಬಂದುಬಿಟ್ಟಿತು! ಅವರ ಬಾಲ್ಯದಿಂದ ಹಿಡಿದು ಅದುವರೆಗಿನ ಸಾಮಾನ್ಯ ಚಿಕ್ಕ ಪುಟ್ಟ ಘಟನೆಗಳೂ ಸಹ ಅವರ ಸ್ಮೃತಿಪಟಲದಲ್ಲಿ ಮೂಡಿಬಂದವು.

ಡಾ| ಆರೋಗ್ಯಂರವರು ಬಾಲ್ಯದಲ್ಲೇ ತಾಯಿಯನ್ನು ಕಳಕೊಂಡ ತಬ್ಬಲಿಯಾಗಿದ್ದರು. ಅವರ ತಂದೆ ಪುನರ್ವಿವಾಹ ಮಾಡಿಕೊಂಡು ಸುಂದರಿಯೊಬ್ಬಳನ್ನು ಮನೆಗೆ ಕರೆತಂದಿದ್ದರು. ತಬ್ಬಲಿಯಾದ ಬಾಲಕನಿಗೆ ತನ್ನ ತಾಯಿಯ ಸ್ಥಾನದಲ್ಲಿ ಮತ್ತೋರ್ವಳನ್ನು ಕಂಡು ಒಮ್ಮೆಗೆ ಸಂತೋಷವೇ ಆಗಿದ್ದಿತು. ಆದರೆ ಕೆಲವೇ ದಿನಗಳ ತರುವಾಯ ಆ ಮಲತಾಯಿಯಿಂದ ಪಡಬಾರದ ಪಾಡು ಪಡುವಂತಾಗಿ, ಬಹಳ ಕಷ್ಟದಲ್ಲಿ ಸಿಲುಕಿದ್ದರು. ಡಾ| ಆರೋಗ್ಯಂರವರು, ಕೊನೆಗೆ ಆ ಕಷ್ಟ ಕಿರುಕುಳಗಳನ್ನು ಸಹಿಸಲಾರದೆ, ಮನೆಬಿಟ್ಟು ಹೊರಟಿದ್ದರು.

ಚಿಕ್ಕ ವಯಸ್ಸಿನಲ್ಲೇ ಮನೆ ಬಿಟ್ಟು ಹೊರಟ ಅವರು ಈಸಾಯಿ ಪಾದ್ರಿಗಳೊಬ್ಬರ ಕೈಗೆ ಸೇರಿದರು. ಆ ಪಾದ್ರಿಗಳೇನು ಅವರನ್ನು ಹಾಗೇ ಬಿಡಲಿಲ್ಲ; ಸಂತೋಷದಿಂದ ತಮ್ಮ ಸ್ವಜಾತಿಗೆ ಸೇರಿಸಿಬಿಟ್ಟರು. ಅವರ ಅಶನವಸನಗಳ ವ್ಯವಸ್ಥೆಯನ್ನೂ ಆ ಪಾದ್ರಿಗಳೇ ವಹಿಸಿಕೊಂಡು, ಅಲ್ಪ ಸ್ವಲ್ಪ ವಿದ್ಯಾಭ್ಯಾಸವನ್ನೂ ಮಾಡಿಸಿದ್ದರು. ಆ ಮೇಲೆ ಅವರು ವಯಸ್ಕರಾಗುತ್ತಿರಲು ಪಾದ್ರಿಗಳು ಅವರನ್ನು ಕೈಬಿಟ್ಟರು. ಅನಂತರ ಅವರಿಗೆಲ್ಲಿಯೂ ಆಶ್ರಯ ದೊರೆಯದೆ, ಕಲಕತ್ತ, ಬೊಂಬಾಯಿಗಳತ್ತ ಅವರು ತಿರುಗುತ್ತ ಇರುತ್ತಿದ್ದರು. ಆ ಸಂದರ್ಭಗಳಲ್ಲಿ ಹೊಟ್ಟೆಗಿಲ್ಲದೆ, ಬಟ್ಟೆಗಿಲ್ಲದೆ, ಮಲಗುವ ದಕ್ಕೂ ಸ್ಥಳವಿಲ್ಲದೆ, ಹೀಗೆ ಅನೇಕ ಸಂಕಷ್ಟಗಳನ್ನವರು ಅನುಭವಿಸಿದ್ದರು.

ಇಂತು ಈ ವಿಚಾರಗಳೆಲ್ಲ ಒಂದೊಂದಾಗಿ ಅವರ ಕಣ್ಣ ಮುಂದೆ ಹಾಯ್ದು ಹೋಗುತ್ತಿರಲು, ಕುರ್ಚಿಯಲ್ಲಿ ಒರಗಿದ್ದ ಅವರಿಗೆ, ಹಾಗೆಯೇ ನಿದ್ರೆಹಿಡಿಯಿತು. ಪಾಪ! ಹಿಂದಿನ ದಿನ ಹಾಸಿಗೆಯಲ್ಲೇ ಮಲಗಿ ಸುಖ ಪಡುತ್ತಿದ್ದ ಆ ಜೀವ, ಇಂದು ಯಾವುದರ ಪರಿವೆಯೂ ಇಲ್ಲದೆ, ಒರಗಿದ್ದ ಕುರ್ಚಿಯ ಮೇಲೆಯೇ ರಾತ್ರಿಯನ್ನು ಕಳೆಯುವ ಸ್ಥಿತಿಯಲ್ಲಿದ್ದಿತು. ಅಂತೆಯೇ ಅವರು ನಿದ್ರೆಯಲ್ಲೊಂದು ಸುಂದರಸ್ವಪ್ನವನ್ನು ಕಂಡರು:

"ಚಿಂತೆಯಿಂದ ಬೆಂದ ಅವರು ಅಳುತ್ತಿದ್ದಾರೆ. ಅಷ್ಟರಲ್ಲೆ ಪ್ರಸನ್ನ ವದನನಾದ ಗಜಮುಖನು ತನ್ನ ವಾಹನದ ಮೇಲೇರಿಕೊಂಡು, ಅವರ ಸಮ್ಮುಖಕ್ಕೆ ಬಂದಿದ್ದಾನೆ. ಅವರ ಸ್ಥಿತಿಯನ್ನು ನೋಡಿ ಮರುಕಗೊಂಡು, "ವತ್ಸಾ! ಅಳಬೇಡಪ್ಪ, ನೀನೇಕೆ ಹೀಗಿರುವೆ? ನಿನಗೇನು ಕಷ್ಟಬಂದಿದೆ? ಹೇಳಪ್ಪಾ!" ಎಂಬುದಾಗಿ ಆ ದಿವ್ಯಮೂರ್ತಿಯು ಕೇಳುತ್ತಿರಲು, ಡಾ| ಆರೋಗ್ಯಂರವರು ಸಂತಸಗೊಂಡು ನೋಡುತ್ತಾರೆ. ಆಗ ಅವರಿಗೆ ಇನ್ನೊಂದು ಚಮತ್ಕಾರ ತೋರಿದಂತಾಗಿ ಮತ್ತೂ ಆನಂದವಾಗುವುದು— ಎಷ್ಟೋ ವರ್ಷಗಳ ಹಿಂದೆ ತಾವು ಮನೆಬಿಟ್ಟು ಹೊರಟಾಗ ನೋಡಿದ್ದ ಅವರ ತಂಗಿ, ಬಾಲಂಮಾಲಳೂ, ಮಹಾ ಗಣಪನ ಹಿಂದೆಯೇ ಬರುತ್ತಿರುವಂತೆ ತೋರಿತು. ಹತ್ತಿರ ಬಂದು ಗಣೇಶನ ಪಕ್ಕದಲ್ಲೇ ನಿಂತಿದ್ದಾಳೆ; ಅಣ್ಣನ ಈ ಶೋಚನೀಯ ಅವಸ್ಥೆಯನ್ನು ನೋಡಿ ಅವಳಿಗೂ ಕಣ್ಣೀರು ಬಂದಿದೆ. ಡಾ| ಆರೋಗ್ಯಂರವರಿಗೆ ತಂಗಿಯ ಆಗಮನದಿಂದ ಒಮ್ಮೆ ಸಂತೋಷವಾಗಿದ್ದರೂ ತನ್ನ ತಂಗಿ ತನ್ನನ್ನೀ ಸ್ಥಿತಿಯಲ್ಲಿ ನೋಡಿದಳಲ್ಲ? ಎಂದು ಬೇಸರವೂ ಆಗುತ್ತಿದೆ. ಅಂತಹ ಆ ವಿಚಿತ್ರ ಸ್ವಪ್ನದಲ್ಲಿ, ವಿನಾಯಕನು ಅವರನ್ನು ಸಮಾಧಾನಪಡಿಸುತ್ತ "ಮಗು, ಅಳಬೇಡಪ್ಪ, ನಿನ್ನ ಕಷ್ಟಗಳೆಲ್ಲ ನಿವಾರಣೆಯಾಗುತ್ತವೆ. ಧೈರ್ಯವಾಗಿರು" ಎಂದು ಹೇಳುತ್ತಿರುವಂತೆ ಭಾಸವಾಯಿತು. ಅನಂತರ ತಂಗಿ ಬಾಲಂಮಾಲಳೂ ಕೂಡ "ಅಣ್ಣ! ಅಳಬೇಡಣ್ಣ! ಕಷ್ಟಬಂದಾಗ ಧೈರ್ಯವನ್ನು ಬಿಡಬಾರದು, ನಿನ್ನ ಎಲ್ಲಾ ದುಃಖದಾರಿದ್ರ್ಯಾದಿಗಳೂ ದೂರವಾಗುತ್ತವೆ, ಹೆದರಬೇಡಣ್ಣ" ಎಂಬುದಾಗಿ ಹೇಳುತ್ತಿರುವಂತೆ ಭಾಸವಾಯಿತವರಿಗೆ. ಈ ರೀತಿಯಿಂದ ಡಾ| ಆರೋಗ್ಯಂರವರು ಅರಿಯದ ಬಾಲಕರಂತೆ, ಸುಖಸ್ವಪ್ನದಲ್ಲಿ ವಿಹರಿಸುತ್ತ ತಮ್ಮ ಮನಸ್ಸನ್ನು ಕನಸಿನಲ್ಲೇ ಹಗುರಮಾಡಿಕೊಳ್ಳುತ್ತಿದ್ದರು.

"ಈ ವಿಧದಿಂದ ಕ್ಷಣಕಾಲ ಸಂತೋಷಗೊಂಡಿರುತ್ತಿರಲು, ಮತ್ತೆ ಒಂದೇ ನಿಮಿಷ! ನೋಡುತ್ತಾರೆ! ಬನ್ಸಿಲಾಲ್ ಸೇಠಜೀಯವರು, ವಿಕಾರ ರೂಪಧಾರಿಗಳಾಗಿ ಬಂದು, "ಏಯ್! ಎಲ್ಲಿದ್ದಿ? ಕೊಡು ನನ್ನ ಹಣ!" ಎನ್ನುತ್ತ ಗದರಿಸುತ್ತ ಹೊಡೆಯಲು ಕೈಯೆತ್ತಿಕೊಂಡು ಬರುತ್ತಿದ್ದಾರೆ ಎಂಬಂತೆ ತೋರುತ್ತಿರಲು, ಅವರು ಗಾಬರಿಗೊಂಡು ಥರಥರನೆ ನಡುಗ ತೊಡಗಿದರು. ಅದೇ ಸ್ಥಿತಿಯಲ್ಲೇ ಅವರಿಗೆ ಹೊಡೆದೆಬ್ಬಿಸಿದಂತೆ ಫಕ್ಕನೆ ಎಚ್ಚರವಾಯಿತು. ಸ್ವಪ್ನವನ್ನು ಕಂಡು ಗಾಬರಿಯಿಂದ ಎಚ್ಚರವಾದ ಅವರಿಗೆ ಒಂದು ಸಲ ವೈಜುಂ ಎಂದಿತು. ಎದೆಯ ಬಡಿತದ ವೇಗ ತೀವ್ರ ಗತಿಗೇರಿತು. ಎದ್ದು ಕುಳಿತುಕೊಳ್ಳುವಷ್ಟು ಶಕ್ತಿಯು ತನ್ನಲ್ಲಿ ಉಳಿದಿಲ್ಲ ವೆಂಬಂತೆ ಅವರಿಗೆ ಭಾಸವಾಯಿತು. ಸ್ವಲ್ಪ ಹೊತ್ತು ಕಳೆದ ಬಳಿಕ ಹೇಗೋ ಮೆಲ್ಲನೆದ್ದು ಕುಳಿತುಕೊಂಡರು; ಸುತ್ತಲೂ ನೋಡಿದರು; ಬೆಳಗಾಗಿದೆ ಯೆಂಬುದು ಖಚಿತವಾಯಿತವರಿಗೆ. ಸುಪ್ರಭಾತದ ಸುಮಧುರ ಖಗಗಾನ ದೊಡನೆ, ತಣ್ಣನೆಯ ಗಾಳಿಬೀಸುತ್ತ ಜೀವಕೋಟಿಗಳಲ್ಲಿ ನವಚೈತನ್ಯ ವನ್ನು ತುಂಬುತ್ತಿರುವಂತೆ ತೋರುತ್ತಿತ್ತು. ಆದರೆ, ಭಾಗ್ಯಹೀನನಾದ ತನಗೆ ಆ ಸಂತೋಷವನ್ನು ಸವಿಯುವ ಸುಯೋಗವೆಲ್ಲಿದೆ? ಎಂದು ಯೋಚಿಸುತ್ತ ಡಾ| ಆರೋಗ್ಯಂರವರು ಖಿನ್ನವದನರಾಗಿ ಕುಳಿತುಕೊಂಡೇ ಇದ್ದರು.

"ಶುಕ್ರವಾರ.........! ಹೌದು ಅದೇ ಶುಕ್ರವಾರ!" ಹೀಗೆ ಅವರಿಗೆ ಶುಕ್ರವಾರದ ನೆನಪಾಗಿ ಮನದ ಕಳವಳ ಮತ್ತಷ್ಟು ಹೆಚ್ಚಿತು. ಅಷ್ಟರಲ್ಲೇ ಹೊರಗಡೆಯಿಂದ ಬಾಗಿಲು ತಟ್ಟಿದ "ಕಡ ಕಡ" ಶಬ್ದ!

"ಯಾರದು?" ಎಂದು ಕೇಳಲು ಬಾಯಿತೆರೆದರೂ, ನಾಲಿಗೆಯೇ ಚಲಿಸಲಿಲ್ಲ.

ಗಂಟಲೊಣಗಿ ತಲೆತಿರುಗುವಂತಾಗುತ್ತಿರಲು ಪುನಃ ಅದೇ "ಕಟ ಕಟ ಕಟ ಕಟ" ಶಬ್ದ ಜೋರಾಗಿ ಕೇಳತೊಡಗಿತು. ಆಗ ಅವರು, "ಇಡಿ ಮುಳುಗಿದ ಮೇಲೆ ಚಳಿಯಿಲ್ಲ"ಎಂಬ ಸ್ಥಿತಿಗೆ ಬಂದು, ಮೆಲ್ಲನೆ ಮೇಲೆದ್ದು, "ಇಲ್ಲಿಗೆ ನನ್ನ ಅವಸ್ಥೆ ಮುಗಿಯಿತು, ಬಾಗಿಲು ತಟ್ಟುತ್ತಿರುವವರು ಪೋಲೀ ಸಿನವರೇ ಆಗಿರಬೇಕು" ಎಂದುಕೊಂಡರು ಮನದಲ್ಲಿ. ಆದರೆ, ಮರು ಗಳಿಗೆಯಲ್ಲೇ ಅವರಿಗೆ ಇಂದು ಶುಕ್ರವಾರವಲ್ಲವೆಂಬುದು ನೆನಪಾದ ಮೇಲೆ, ತುಸು ಧೈರ್ಯವುಂಟಾಯಿತು; ಎದೆಯ ಮೇಲೆ ಕೈಯ್ಯನ್ನೊತ್ತಿ ಹಿಡಿದು

ಕೊಂಡೇ ಕಿಟಕಿಯ ಬಾಗಿಲು ತೆರೆದು, ನಡುಗುವ ಸ್ವರದಲ್ಲೇ ಕೇಳಿದರು- "ಯಾರದು?" ಎಂದು.

"ಸ್ವಾಮಿ! ತಾವು ನನಗೊಂದು ದೊಡ್ಡ ಉಪಕಾರಮಾಡಬೇಕು. ಒಂದು ಕಾಗದದಲ್ಲಿ—"ನಾನು ಚಿಕಿತ್ಸೆಮಾಡಿದೆ; ಆದರೆ, ರೋಗದ ಪ್ರಭಾವ ಹೆಚ್ಚಾದುದರಿಂದ, ಪ್ರಯೋಜನವಾಗದೆ, ಈ ರೋಗಿಯು ಈ ದಿನ ಮರಣ ಹೊಂದಿರುವನು'' ಎಂಬುದಾಗಿ ಬರೆದುಕೊಡಬೇಕು. ಇದಕ್ಕಾಗಿ ಇದೊ, ತಮಗೆ ರೂಪಾಯಿ ಐದುಸಾವಿರ ಕೊಡುತ್ತೇನೆ" ಎಂದಿತು, ಹೊರಗಡೆಯಿಂದ ಒಂದು ವ್ಯಕ್ತಿ.

ಡಾ| ಆರೋಗ್ಯಂರವರು ಅಚ್ಚರಿಗೊಂಡರು. ಅದೇನೆಂಬುದೇ ಅವರಿಗೆ ಅರ್ಥವಾಗಲಿಲ್ಲ. ಕ್ಷಣಕಾಲ ಆಲೋಚಿಸಿ, ಚೇತರಿಸಿಕೊಂಡು, ಬಾಗಿಲು ತೆರೆದು "ನೀವು ಯಾರು?'' ಎಂದರು; ಗಂಭೀರಸ್ವರದಿಂದ. "ಸ್ವಾಮಿ! ನನ್ನ ಹೆಸರು ಶಿವ ಸುಬ್ರಹ್ಮಣ್ಯ ಅಯ್ಯರ್ ಎಂದು. ತಾವು ಇಷ್ಟೊಂದು ಉಪಕಾರಮಾಡಿದರೆ, ನಾನು ತಮಗೆ ಚಿರಋಣಿ'' ಎಂದರು; ಶಿವಸುಬ್ರಹ್ಮಣ್ಯ ಅಯ್ಯರರು.

ಡಾ| ಆರೋಗ್ಯಂರವರು ತಮ್ಮ ಕಣ್ಣುಕಿವಿಗಳನ್ನೇ ಕ್ಷಣಕಾಲ ನಂಬದಾದರು. "ಇದೇನು ಕಷ್ಟದ ಮೇಲೆ ಮತ್ತೊಂದು ಕಷ್ಟ ಎರಗುತ್ತಿರುವುದೋ? ಅಥವಾ ....ಏನು?'' ಎಂದು ದಿಗ್ಭ್ರಾಂತರಾದ ಅವರು ಹೇಳಿದರು —"ನೀವು ಹೇಳುತ್ತಿರುವುದು ಸತ್ಯವಿರಬಹುದು. ಆದರೆ, ನನಗೆ ನಿಮ್ಮ ಇಚ್ಛೆಯಂತೆ ಅದರಲ್ಲಿ ಭಾಗವಹಿಸಲು ದಿಗಿಲಾಗುತ್ತಿರುವುದು. ಇದರಿಂದಾಗಿ ನನಗೆ ಮುಂದೆ ವೃಥಾ ಕಷ್ಟನಷ್ಟಗಳುಂಟಾಗಬಹುದು. ಆದುದರಿಂದ ನಿಮಗೆ ಹಾಗೆ ಬರೆದುಕೊಡಲು ನಾನು ಇಷ್ಟಪಡುವುದಿಲ್ಲ'' ಡಾಕ್ಟರರು ದೃಢತೆಯಿಂದ ಹೇಳಿದರು.

"ಡಾಕ್ಟರರೆ, ತಮಗೆ ಇದರಿಂದಾಗಿ ಸ್ವಲ್ಪವೂ ಕಷ್ಟ ಬರಲಾರದು. ನಷ್ಟವೂ ಉಂಟಾಗದು. ಈ ವಿಚಾರವಾಗಿ ತಾವು ಸ್ವಲ್ಪವೂ ಯೋಚಿಸುವುದು ಬೇಡ. ನಾನು ಕೂಡಾ ತಮ್ಮವನೇ ಆಗಿದ್ದೇನೆ. ತಾವೂ ತಮಿಳುನಾಡಿನವರು; ನಾನೂ ತಮಿಳುನಾಡಿನವನು. ಹೀಗಿರುವಾಗ ನಾನು ತಮ್ಮನ್ನು ಮೋಸದಿಂದ ಕಷ್ಟದಲ್ಲೆಂದೂ ಸಿಲುಕಿಸಲಾರೆ. ನಾನು ಈಗ ತಮ್ಮೊಡನೆ ಹೇಳಿದ—ತಾವು ಬರೆಕೊಡಬೇಕಾದ ವಿಷಯ, ಅಕ್ಷರಶಃ ಸತ್ಯ

ವಾದುದು. ಅದರಲ್ಲಿ ಮೋಸ-ವಂಚನೆಗಳಿಲ್ಲ ತಾವು ದೊಡ್ಡ ಮನಸ್ಸು ಮಾಡಿ ಬರೆದುಕೊಟ್ಟು ನನಗೆ ಸಹಾಯಮಾಡಬೇಕು. ನಾನು ತಮ್ಮ ಈ ಉಪಕಾರವನ್ನು ಎಂದೂ ಮರೆಯಲಾರೆ'' ಎಂದರು; ಅಯ್ಯರರು.

ಅನಂತರ ಶಿವಸುಬ್ರಹ್ಮಣ್ಯ ಅಯ್ಯರರು ಡಾಕ್ಟರರಿಗೆ ತನ್ನ ಎಲ್ಲ ಪೂರ್ವವೃತ್ತಾಂತವನ್ನೂ ಸವಿಸ್ತಾರವಾಗಿ ಇಂತು ಹೇಳತೊಡಗಿದರು:— "ವಯೋವೃದ್ಧರಾದ ನನ್ನ ಮಾವ ಅಂದರೆ (ಹೆಂಡತಿಯ ತಂದೆ)ಯೊಡನೆ ತೀರ್ಥಯಾತ್ರೆಗಾಗಿ ನಾನು ಊರಿನಿಂದ ಹೊರಟಿದ್ದೆ. ವೃದ್ಧರಾದ ಅವರಿಗೆ ಜೊತೆಗೆ ನನ್ನ ಅಗತ್ಯವಿತ್ತು. ಹಾಗೆ ಹೊರಟ ನಾವುಗಳು, ರಾಮೇಶ್ವರ, ಬದರಿಕಾಶ್ರಮ, ಪ್ರಯಾಗ ಮೊದಲಾದ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ಕಾಶಿಕ್ಷೇತ್ರಕ್ಕೆ (ಇಲ್ಲಿಗೆ) ಬಂದು ತಲಪಿದೆವು. ಇಲ್ಲಿಯ ಒಂದು ಧರ್ಮ ಛತ್ರದಲ್ಲಿ ನಾವು ಬಿಡಾರಮಾಡಿದೆವು. ಮಾವನವರಿಗೆ ಊರಿನಿಂದ ಹೊರಟ ಕೆಲವು ದಿನಗಳಲ್ಲೇ ಜ್ವರ ಪ್ರಾರಂಭವಾಗಿದ್ದಿತು. ಪ್ರಾರಂಭದಲ್ಲಿ ಅಷ್ಟೇನೂ ವಿಶೇಷವಾಗಿರಲಿಲ್ಲ ಆದರೆ, ಮತ್ತೆ ಒಂದು ವಾರ ಕಳೆಯುತ್ತಿರಲು ಆ ಜ್ವರ ವಿಷಮಜ್ವರವಾಗಿ ಪರಿಣಮಿಸಿತು. ವೃದ್ಧಾಪ್ಯದಿಂದುಂಟಾದ ನಿಶ್ಶಕ್ತಿಯಿಂದಲೂ ಸಾಂಸಾರಿಕ ತಾಪತ್ರಯಗಳ ಯೋಚನೆಗಳಿಂದಲೂ ಅವರು ನಿನ್ನೆ ಬುಧವಾರ ರಾತ್ರೆ ಈ ಪುಣ್ಯಕ್ಷೇತ್ರದಲ್ಲಿ ಸ್ವರ್ಗಸ್ಥ ರಾದರು. ಈಗ ಒಂದು ವರ್ಷದಿಂದಲೂ, ಅವರು ಪೂರ್ಣ ಆರೋಗ್ಯ ವಾಗಿರಲಿಲ್ಲ. ಅವರು ಒಂದು ವೀಲ್‌ನಾಮೆಯನ್ನು ಬರೆಸಿ ಬಹಿರಂಗ ಪಡಿಸದೆ ರಿಜಿಸ್ಟ್ರುಮಾಡಿಸಿದ್ದರು. ಅದರ ಒಂದು ಪ್ರತಿ ಇಂದು ನನಗೆ ಅವರ ಪೆಟ್ಟಿಗೆಯಲ್ಲಿ ಸಿಕ್ಕಿತು. ಅವರು ಮೃತಪಟ್ಟ ನಂತರವೇ ನನಗದು ಸಿಕ್ಕಿತು. ಅದರಲ್ಲಿ ಬರೆದ ಪ್ರಕಾರ ಅವರ ಆಸ್ತಿ ವ ಸ್ಥಿರಚರ ಸೊತ್ತುಗಳೆಲ್ಲವೂ ಕುಟುಂಬ ರಕ್ಷಣಾರ್ಥವಾಗಿ ಅವರ ಉತ್ತರಾಧಿಕಾರಿಯಾದವನಿಗೆ ಸೇರತಕ್ಕ ದ್ದಾಗಿವೆ. ನಗದಾಗಿ ಇರುವ ಹಣ, ಅವರ ಮಗಳಿಗಾಗಿ (ನನ್ನ ಹೆಂಡತಿ ಗಾಗಿ) ವಿಂಗಡಿಸಿ ಇಡಲ್ಪಟ್ಟಿದೆ. ಆದರೆ, ಅದರಲ್ಲಿ ಮತ್ತೊಂದು ಶರ್ತವಿದೆ. ಅದು ಹೀಗಿದೆ—"ತನ್ನ ಅಂದರೆ (ಮಾವನ) ಮರಣಕ್ಕೆ ಮೊದಲು ನನಗೆ (ನನ್ನ ಹೆಂಡತಿಯಲ್ಲಿ) ಗಂಡುಮಗು ಹುಟ್ಟಿದರೆ, ಸರ್ವಾಧಿ ಆಸ್ತಿ ವ ಸೊತ್ತು ಗಳಿಗೂ ಆ ನನ್ನ ಪುತ್ರನೇ ಹಕ್ಕುದಾರನಾಗಿರತಕ್ಕದ್ದು. ಹಾಗೆ ಪುತ್ರ ಜನನವಾಗದಿದ್ದರೆ, ಅದರ ಸರ್ವಾಧಿಕಾರವೂ ಅವರ ಉತ್ತರಾಧಿಕಾರಿಗಳಿಗೆ

ಇರತಕ್ಕದ್ದು" ಹೀಗೆ ಬರೆದಿರುವುದು. "ವೈದ್ಯರೆ ನಾನು ತಮ್ಮೊಡನೆ ಅಸತ್ಯವನ್ನಾಡುತ್ತಿಲ್ಲ. ಇದ್ದ ವಿಚಾರ ಅಂತೆಯೇ ಹೇಳುತ್ತಲಿದ್ದೇನೆ. ನನಗೆ ಒಂದರ ಹಿಂದೊಂದರಂತೆ ಜನಿಸಿದ ಮಕ್ಕಳು ಮೂವರೂ ಹೆಣ್ಣು ಮಕ್ಕಳು. ನಾನು ತೀರ್ಥಯಾತ್ರೆಗಾಗಿ ಮನೆಯಿಂದ ಹೊರಡುವಾಗ ನನ್ನ ಹೆಂಡತಿ ಏಳು ತಿಂಗಳ ಗರ್ಭಿಣಿಯಾಗಿದ್ದಳು. ಇಂದು ಪ್ರಾತಃಕಾಲ ಗಂಡುಮಗು ಹೆತ್ತಿದ್ದಾಳೆ. ಮಗು ಬಾಣಂತಿ ಕೂಡ ಸೌಖ್ಯದಲ್ಲಿದ್ದಾರೆ ಎಂಬುದಾಗಿ ಊರಿನಿಂದ ತಂತಿ ಬಂದಿರುವುದು. ಒಂದುವೇಳೆ ಈ ಮಗು ನನ್ನ ಮಾವನು ಮೃತಪಡುವ ಮೊದಲು ಹುಟ್ಟುತ್ತಿದ್ದರೆ, ಸರ್ವಾಧಿ ಆಸ್ತಿಯೂ ಉಳಿಯಬಹುದಿತ್ತು ಈಗ ವೀಲ್‌ನಾಮೆಯ ಪ್ರಕಾರ ಆಸ್ತಿಯೆಲ್ಲವೂ ಅನ್ಯರಿಗೆ ಸೇರುವುದು. ಮಾವನವರು ನಮ್ಮೊಡನೆ, ಯಾವುದನ್ನೂ ಹೇಳದೆ ಕೇಳದೆ ಆಲೋಚಿಸದೆ, ಅವಸರದಲ್ಲಿ ಈ ವೀಲ್‌ನಾಮೆಯನ್ನು ಬರೆಸಿ ಗುಪ್ತವಾಗಿ ರಿಜಿಸ್ಟ್ರಿಮಾಡಿಸಿ ಇರಿಸಿದ್ದರು. ಆದುದರಿಂದ ಈ ಕುರಿತು ಈಗ ಬೇರೇನೂ ಮಾಡಲಾಗುವುದಿಲ್ಲ" ಎಂದು ಹೇಳುತ್ತ ಅಯ್ಯರರು ಸ್ವಲ್ಪ ಹೊತ್ತು ತಡೆದು ಪುನಃ ಹೇಳಿದರು:

"ವೈದ್ಯರೆ, ಈಗ ಒಂದೇ ಒಂದು ಉಪಾಯವು ನಮ್ಮ ಮುಂದಿದೆ. ಅದು ಯಾವುದೆಂದರೆ, ತಾವು ದೊಡ್ಡ ಮನಸ್ಸುಮಾಡಬೇಕು. ಉಪಕಾರ ಮಾಡಬೇಕು. ಅನ್ಯಾಯವಾಗಿ ಅನ್ಯರ ವಶಕ್ಕೆ ಸೇರಲಿರುವ ಈ ಸಮೃದ್ಧವಾದ ಆಸ್ತಿಯನ್ನು ಉಳಿಸಿಕೊಡುವ ಸಮಸ್ತಭಾರವೂ ಈಗ ತಮ್ಮ ಕೈಯಲ್ಲಿದೆ. ಮುದುಕರು ಹೇಗೂ ತೀರಿಕೊಂಡರು. ಅವರು ನಿನ್ನೆ ರಾತ್ರೆ ಸತ್ತುಹೋದರು, ಅಥವಾ ಈ ದಿನ ಬೆಳಗ್ಗೆ ಸತ್ತರು, ಅದನ್ನು ಹೇಗೆ ತಿಳಿದುಕೊಂಡರೂ ಒಂದೆ. ಅದರಲ್ಲಿ ಅಭ್ಯಂತರವಿಲ್ಲ. ಇಲ್ಲಿ ನನ್ನ ಇತರ ಸಂಬಂಧಿಕರಾಗಲಿ ಗುರುತಿನವರಾಗಲಿ ಯಾರೂ ಇಲ್ಲ. ಮುದುಕರು ಇಂದು ಬೆಳಗ್ಗೆ ಮೃತಪಟ್ಟಿದ್ದರೆ ಎಲ್ಲವೂ ಅನುಕೂಲವಾಗಿಯೇ ಇರುತ್ತಿತ್ತು. ತಾವು ತಮಿಳಿಗರಾದ ನಮ್ಮವರೆ, ಎಂದು ತಿಳಿದುಕೊಂಡ ಬಳಿಕ, ಧೈರ್ಯದಿಂದ ನಾನು ತಮ್ಮಲ್ಲಿಗೆ ಬಂದಿರುವೆನು. ಇದೋ, ತಮಗೆ ಅನಂತ ವಂದನೆಗಳನ್ನರ್ಪಿಸುತ್ತಿರುವೆನು. ಇನ್ನೂ ಶವಸಂಸ್ಕಾರ ಆಗಿಲ್ಲ. ಹನುಮಾನ್ ಘಾಟ್‌ನಲ್ಲಿ ಕ್ರಿಯೆಯನ್ನು ಮಾಡಲಿದ್ದೇನೆ. ತಾವು ದಯಮಾಡಿ ಟ್ಟು— "ನಾನು ಚಿಕಿತ್ಸೆಮಾಡಿದೆ, ಆದರೆ ಕಾಯಿಲೆ ಗುಣವಾಗಲಿಲ್ಲ. ಈ ದಿನ

ಹತ್ತು ಘಂಟೆ ಸಮಯದಲ್ಲಿ ರೋಗಿಯು ಮೃತಪಟ್ಟಿರುವನು" ಎಂಬುದಾಗಿ ಬರೆದು ಕೊಡಬೇಕು. ತಮಗೆ ಇದರಿಂದಾಗಿ ಯಾವ ವಿಧದಲ್ಲೂ ತೊಂದರೆ ಯಾಗದು. ನಾನು ತಮಗೆ ರೂಪಾಯಿ ಐದು ಸಾವಿರ ಈಗಲೇ ಕೊಡು ತ್ತೇನೆ. ದಯವಿಟ್ಟು ಈ ಹಣವನ್ನು ಸ್ವೀಕರಿಸಿ ಬರೆದುಕೊಡಬೇಕು" ಎಂಬುದಾಗಿ ಹೇಳುತ್ತ ಶಿವಸುಬ್ರಹ್ಮಣ್ಯ ಅಯ್ಯರರು ಐದು ಸಾವಿರ ರೂಪಾಯಿಗಳ ನೋಟುಗಳನ್ನು ಡಾ| ಆರೋಗ್ಯಂರವರ ಮುಂದೆ ಹಿಡಿದು ಕೊಂಡು ನಿಂತರು. ಮತ್ತು ಹೇಳಿದರು—"ಊರಿಗೆ ಈ ವಿಚಾರವಾಗಿ ತಂತಿಯನ್ನು ಬಿಡಬೇಕಾಗಿದೆ. ತಾವೂ ಕೂಡ ಹನುಮಾನ್‌ಘಾಟ್‌ನಲ್ಲಿ ನಡೆಯುವ ಶವಸಂಸ್ಕಾರ ಉತ್ತರಕ್ರಿಯೆಗಳನ್ನು ಬಂದು ನೋಡಬೇಕು. ನನ್ನನ್ನು ರಕ್ಷಿಸಬೇಕು" ಎಂದು ಅಯ್ಯರರು ಅಂಗಲಾಚಿ ಬೇಡಿಕೊಂಡರು.

ಡಾ| ಆರೋಗ್ಯಂರವರು ಬಹಳ ಯೋಚಿಸಿದರು. ತಮ್ಮ ಸ್ವಪ್ನ ವನ್ನು ಸ್ಮರಿಸಿಕೊಂಡ ಅವರು ಹರ್ಷಚಿತ್ತರಾದರು. ಮಹಾಗಣಪತಿಯು ಕನಸಿನಲ್ಲಿ ಬಂದು ಅಭಯಪ್ರದಾನಮಾಡಿದಂತೇ ಕಷ್ಟ ನಿವಾರಣೆಗಾಗಿಯೇ ಇದೀಗ ಈ ಮಾರ್ಗವನ್ನು ತೋರಿಸಿರಬೇಕೆಂದು ಮನಗಂಡ ಅವರು, ಸೇಠಜೀಯವರ ಸಾಲದಿಂದ ಹೇಗಾದರೂ ವಿಮುಕ್ತರಾಗಬೇಕಾಗಿದ್ದುದ ರಿಂದ, ಹಣವನ್ನು ತೆಗೆದುಕೊಂಡು ಮೊದಲು ಸಾಲ ತೀರಿಸಿ, ಮಿಕ್ಕುಳಿದ ಹಣದಿಂದ ಏನಾದರೂ ಜೀವನೋಪಾಯವನ್ನು ಹುಡುಕಬಹುದೆಂದು ನಿರ್ಧರಿಸಿಕೊಂಡರು. ಮನದಲ್ಲೇ ಮತ್ತೊಂದು ಪ್ರತಿಜ್ಞೆಯನ್ನೂ ಅವರು ಮಾಡಿಕೊಂಡರು. ಜೀವನದಲ್ಲಿ ಕಷ್ಟನಷ್ಟಗಳಿಗೆ ಕಾರಣವಾದ ಪಾನ.... ಶರಾಬು! ಅದನ್ನೆಂದೂ ಮುಟ್ಟಲಾರೆ. ಇದೇ ಅವರ ಆ ಪ್ರತಿಜ್ಞೆಯಾಗಿ ದ್ದಿತು. ಕಾರ್ಯಪ್ರವರ್ತನಾಗುವ ಮೊದಲೇ ಚೆನ್ನಾಗಿ ವಿಮರ್ಶೆಮಾಡಿ ಕೊಳ್ಳಬೇಕು. ಅಂತೆಯೇ ಡಾ| ಆರೋಗ್ಯಂರವರು, ವಿಚಾರ ವಿಮರ್ಶೆಗೆ ತೊಡಗಿದರು—'ಅಯ್ಯರರ ಮತದಂತೆ ಬರೆದು ಕೊಟ್ಟರೆ, ಅದು ಅನ್ಯಾಯ ವಾದೀತೆ? ಸತ್ತವನು ಹೇಗೂ ಸತ್ತಿರುವನು. ಇಂದು—ನಿನ್ನೆ—ಅದೆಲ್ಲ ಒಂದೆ. ಇನ್ನು ಆಸ್ತಿಯೆಲ್ಲವೂ ಮಗಳ ಮಗನಿಗೇ ಸೇರುವುದೆನ್ನುವಾಗ ಅದರಲ್ಲಿ ಅನ್ಯಾಯವೆಲ್ಲಿದೆ? ಅದೇ ಸರಿ!' ಎಂದು ನಿರ್ಧರಿಸಿಕೊಂಡ ಡಾಕ್ಟರರು—ಶಿವಸುಬ್ರಹ್ಮಣ್ಯ ಅಯ್ಯರರೊಡನೆ ಹೇಳಿದರು—"ಈ ವಿಚಾರ ವಾಗಿ ನೀವು ಹೇಳಿದ್ದು ನನಗರ್ಥವಾಯಿತು, ಆದರೆ ಚೆನ್ನಾಗಿ ವಿಮರ್ಶೆ

ಮಾಡಿಕೊಳ್ಳಬೇಕಾದುದು ಮುಖ್ಯ. ನನಗೆ ಸಂಜೆಯ ತನಕ ಸ್ವಲ್ಪ ಸಮಯ ಕೊಡಿ, ನಾನು ಆಲೋಚಿಸಿ ಸಾಯಂಕಾಲದೊಳಗೆ, ನಿಮಗೆ ನನ್ನ ನಿರ್ಧಾರವನ್ನು ತಿಳಿಸುವೆನು" ಎಂದರು.

"ಛೆ.... ಛೆ.... ಇಲ್ಲ.... ಇಲ್ಲ.... ಅದರಲ್ಲಿ ವಿಮರ್ಶಿಸುವ ಅಂಶವೇ ಉಳಿದಿಲ್ಲ ಡಾಕ್ಟ್ರೆ! ಇನ್ನು ಯಾವುದಕ್ಕೂ ಸಮಯವೂ ಇಲ್ಲ. ಶವಸಂಸ್ಕಾರಾದಿ ಕಾರ್ಯಗಳು ಈಗಲೇ ನೆರವೇರಬೇಕು. ತಾವು ಅನುಮಾನಿಸಬಾರದು. ನಡೆಯಿರಿ ಹೋಗೋಣ! ಇದೋ ಈಗಲೇ ಈ ಒಂದು ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳಿರಿ! ಒಟ್ಟು ಆರು ಸಾವಿರ ಕೊಡುತ್ತೇನೆ" ಎಂದೆನ್ನುತ್ತ ಅಯ್ಯರರು ಬಲವಂತವಾಗಿಯೇ ಒಂದು ಸಾವಿರ ರೂಪಾಯಿಗಳ ನೋಟುಗಳನ್ನು ಡಾಕ್ಟರರ ಕೈಯಲ್ಲಿಟ್ಟರು. ಮತ್ತು ಒಡನೆಯೇ ಕಾಗದ-ಲೇಖನಿಯನ್ನು ತೆಗೆದು ಅವರ ಎದುರಿಗೇ ಇಟ್ಟುಬಿಟ್ಟರು.

ಡಾ। ಆರೋಗ್ಯಂರವರು ಹಣವನ್ನು ತೆಗೆದು ಭದ್ರವಾಗಿ ತಮ್ಮ ಪೆಟ್ಟಿಗೆಯಲ್ಲಿರಿಸಿ, ಬರೆಯುವುದಕ್ಕೆ ಕುಳಿತರು—"ತಮ್ಮ ಹೆಸರು ಶಿವಸುಬ್ರಹ್ಮಣ್ಯ ಅಯ್ಯರ್ ಅಲ್ಲವೇ?"

"ಹೌದು" ಎಂದರು ಅಯ್ಯರರು.

"ಸರಿ" ಎಂದೆನ್ನುತ್ತ ಡಾಕ್ಟರರು ಬರೆಯತೊಡಗಿದರು:

"ಶಿವಸುಬ್ರಹ್ಮಣ್ಯ ಅಯ್ಯರ್ ಎಂಬ ನಾಮಧಾರಿ, ತಂಜಾವೂರಿನ ಬ್ರಾಹ್ಮಣರೊಬ್ಬರು ತಮ್ಮ ಮಾವ (ಹೆಂಡತಿಯ ತಂದೆ)ಯೊಡನೆ ತೀರ್ಥಯಾತ್ರೆಗಾಗಿ ಕಾಶಿಗೆ ಬಂದಿದ್ದರು. ವಯೋವೃದ್ಧರಾದ ಅವರ ಮಾವಂದಿರು ಪ್ರಯಾಣಕಾಲದಲ್ಲೇ ಕಾಯಿಲೆಗೆ ತುತ್ತಾದರು. ಅವರ ಚಿಕಿತ್ಸೆಗಾಗಿ ಸದ್ರಿಯವರು ನನ್ನ ಬಳಿಗೆ ಬಂದು ಪ್ರಾರ್ಥಿಸಿಕೊಂಡಂತೆ ನಾನು ಔಷಧೋಪಚಾರಗಳನ್ನು ಮಾಡಿದೆ. ಆದರೆ, ವೃದ್ಧಾಪ್ಯದ ಕಾರಣ ಮದ್ದು ಪರಿಣಾಮಕಾರಿಯಾಗಲಿಲ್ಲ. ಈ ದಿನ ಬೆಳಿಗ್ಯೆ ಅವರು ಸುಮಾರು ಹತ್ತು ಗಂಟೆ ಸಮಯದಲ್ಲಿ ಮರಣಹೊಂದಿರುವರು. ಸದ್ರಿ ಅಯ್ಯರರು ಕೇಳಿಕೊಂಡಂತೆ ಈ ಪತ್ರವನ್ನು ಬರೆದುಕೊಡಲಾಗಿದೆ."

ಈ ರೀತಿ ಬರೆದು ಪೂರ್ಣಗೊಳಿಸಿದ ಪತ್ರವನ್ನು ಡಾಕ್ಟರರು ಅಯ್ಯರರ ಕೈಗಿತ್ತರು.

ಸಂತೋಷಗೊಂಡ ಶಿವಸುಬ್ರಹ್ಮಣ್ಯ ಅಯ್ಯರರು, ಡಾಕ್ಟರರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಸಂಧ್ಯಾಕಾಲ ತಪ್ಪದೆ ಹನುಮಾನ್ ಘಾಟ್‌ಗೆ ಬರಬೇಕೆಂದು ಪ್ರಾರ್ಥಿಸಿ ಅಲ್ಲಿಂದ ಹೊರಟು ಹೋದರು.

ಶುಕ್ರವಾರ ದಿನ, ವ್ಯಾದೆಗೆ ಸರಿಯಾಗಿ ಡಾ| ಪಾಲ್ ಆರೋಗ್ಯಂ ರವರು, ಬನ್ಸಿಲಾಲ್ ಸೇಠಜೀಯುವರಿಗೆ ಸಲ್ಲತಕ್ಕ ಹಣವನ್ನು ಕೊಟ್ಟು ರಶೀದಿ ಪಡಕೊಂಡರು. ಇನ್ನು ಮುಂದೆ ಇಂತಹ ಮೋಸಕೃತ್ಯಗಳನ್ನು ಮಾಡಬಾರದೆಂದು, ಸೇಠಜೀಯುವರೂ ಪೊಲೀಸಿನವರೂ ಡಾಕ್ಟರರನ್ನು ಎಚ್ಚರಿಸಿದರು, ಮತ್ತು ಇದೊಂದು ಸಲ ಕ್ಷಮಿಸಿದ್ದೇವೆ ಎಂದೂ ಹೇಳಿ ಕಳುಹಿಸಿಕೊಟ್ಟರು.

ಆ ದಿನ, ವಿನಾಯಕನ ಚೌತಿಯ ಶುಭದಿನವಾಗಿತ್ತು. ಡಾಕ್ಟರ್‌ರವರು ಸೇಠರಲ್ಲಿಂದ ಮರಳುತ್ತ ಪೇಟೆಯಲ್ಲಿ ಸುಂದರವಾದ ಗಣಪತಿಯ ವಿಗ್ರಹಗಳನ್ನು ನೋಡಿ ಹರ್ಷಭರಿತರಾದರು. ತಮ್ಮ ಈಸಾಯಿ ಧರ್ಮವನ್ನು ಮನಸ್ಸಿನಿಂದ ತೊಡೆದು ಹಾಕಿ, ಭಯಭಕ್ತಿಗಳಿಂದ ತಾವೂ ಒಂದು ಗಣಪತಿಯ ಮೂರ್ತಿಯನ್ನು ಕೊಂಡುಕೊಂಡರು. ಮನೆಗೆ ಬಂದು ಗಣೇಶನನ್ನು ಪೀಠದಲ್ಲಿರಿಸಿ, ಧೂಪ ದೀಪ ನೈವೇದ್ಯಗಳನ್ನರ್ಪಿಸಿ, ಪುಷ್ಪಗಳಿಂದ ಅಲಂಕರಿಸಿ ಭಕ್ತಿಯಿಂದ ಕೈ ಮುಗಿದು ಕಣ್ಮುಚ್ಚಿ ಆ ಮಂಗಲ ಮೂರ್ತಿಯ ಎದುರಿಗೆ ನಿಂತುಕೊಂಡು,"ನನ್ನನ್ನು ರಕ್ಷಿಸಿದ ಮಹಾಮಹಿಮ! ಅನಾಥ ರಕ್ಷಕ! ಆಪದ್ಬಾಂಧವ!" ಎಂದು ಅನನ್ಯ ಭಕ್ತಿಯಿಂದ ಪ್ರಾರ್ಥಿಸಿ, ಸಾಷ್ಟಾಂಗ ಪ್ರಣಾಮಗಳನ್ನರ್ಪಿಸಿದರು. ಸಂಜೆಯಾಗುತ್ತಲೇ ಅಯ್ಯರರ ಕೇಳಿಕೆಯಂತೆ, ಹನುಮಾನ್ ಘಾಟ್‌ಗೆ ಹೊರಟು ಹೋಗಿ, ಶಿವಸುಬ್ರಹ್ಮಣ್ಯ ಅಯ್ಯರರನ್ನು ಭೇಟಿಯಾದರು.

ತನ್ನ ದೊಡ್ಡ ಸಂಕಷ್ಟದಿಂದ ಪಾರಾಗಲು ಕಾರಣರಾದ ಶಿವಸುಬ್ರಹ್ಮಣ್ಯ ಅಯ್ಯರರ ಮಾವನ ಅಂತಿಮ, ಪ್ರಥಮ ದರ್ಶನಕ್ಕಾಗಿ ಕಾತರರಾಗಿದ್ದ— ಡಾಕ್ಟರರು ಉತ್ಸಾಹದೊಡನೆ ಆ ಮೃತ ದೇಹದ ಬಳಿಗೆ ಮುನ್ನಡೆದರು; ತೀರ ಹತ್ತಿರಕ್ಕೆ ಹೋಗಿ ನಿಂತರು. ನೋಡಿದರು; ಚೆನ್ನಾಗಿ ನೋಡಿದರು, ದಂಗು ಬಡಿದವರಂತೆ ಮತ್ತೂ ಮತ್ತೂ ಆ ಹೆಣವನ್ನು ನೋಡುತ್ತಾ ಸ್ತಬ್ಧರಾಗಿ ನಿಂತಲ್ಲೇ ನಿಂತುಬಿಟ್ಟರು! ಆ ಮೃತಪಟ್ಟ ವ್ಯಕ್ತಿಯು ತಮ್ಮ ತಂದೆಯ ತದ್ರೂಪದಂತೆ ತೋರಿ, ಡಾ| ಆರೋಗ್ಯಂರವರು ಸಂದೇಹಪಟ್ಟರು, ಕಣ್ಣುಗಳನ್ನುಜ್ಜಿಕೊಂಡು ಪುನಃ ನೋಡಿದರು—ಆ ವ್ಯಕ್ತಿ, ಜೀವವಿಲ್ಲದ ಹೆಣ! ತಮ್ಮ ತಂದೆಯುದೇ ಹೌದೆಂದು ಕಂಡುಹಿಡಿಯಲು ಹೆಚ್ಚು ವಿಳಂಬವಾಗಲಿಲ್ಲ. ಆದರೆ ಅಷ್ಟು ದೊಡ್ಡ ಆಸ್ತಿ ತಮ್ಮ ತಂದೆಗೆ ಇರಲಿಲ್ಲ.

ಈ ಸ್ಥಿತಿಯಲ್ಲಿ ಅವರು ಇಲ್ಲಿ ಹೇಗೆ? ಎಂಬುದೇ ಸಮಸ್ಯೆಯಾಯಿತು, ಡಾ| ಆರೋಗ್ಯಂರವರಿಗೆ.

ಶಿವಸುಬ್ರಹ್ಮಣ್ಯ ಅಯ್ಯರರು ಎಲ್ಲಾ ಕಾರ್ಯಕಲಾಪಗಳನ್ನು ಶೀಘ್ರವಾಗಿ ನೆರವೇರಿಸಿದರು ಡಾ| ಆರೋಗ್ಯಂರವರು ಮೌನವಾಗಿಯೇ ಇದ್ದರು. ಪವಿತ್ರ ನದಿಯಾಗಿರುವ ಗಂಗಾ ತೀರದಲ್ಲಿ ನಡೆಯುವ ಉತ್ತರ ಕ್ರಿಯಾದಿಗಳು, ಬಹು ಚುರುಕಾಗಿ ನೆರವೇರುತ್ತವೆ. ಅಂತೆಯೇ ಉತ್ತರ ಕ್ರಿಯೆಯ ಕೆಲಸ ನೆರವೇರಿತು.

ಆ ಬಳಿಕ ಡಾ| ಆರೋಗ್ಯಂರವರು ಅಯ್ಯರರನ್ನು ತಮ್ಮ ಮನೆಗೆ ಬರಬೇಕೆಂದು ಕೇಳಿಕೊಂಡರು. ಆಗ ಅಯ್ಯರರು ಹೇಳಿದರು: "ನಾನು ಧರ್ಮಛತ್ರಕ್ಕೆ ಹೋಗಿ ಕೆಲವು ಬ್ರಾಹ್ಮಣರನ್ನು ಕರೆಸಿ ಇನ್ನು ಮಾಡಬೇಕಾದ ಶಾಸ್ತ್ರೀಯ ವಿಧಿಗಳನ್ನೆಲ್ಲ ಮಾಡಿ ಪೂರೈಸಬೇಕಾಗಿದೆ. ಆದುದರಿಂದ ನಾಳೆ ಬೆಳಗ್ಗೆ ತಮ್ಮಲ್ಲಿಗೆ ಬರುತ್ತೇನೆ" ಎಂದರು.

ಡಾ| ಆರೋಗ್ಯಂರವರು ಅಲ್ಲಿಂದ ತಮ್ಮ ಮನೆಗೆ ಮರಳಿದರು. ನಡೆದ ವಿಚಾರಗಳನ್ನೆಲ್ಲ ಮೆಲುಕು ಹಾಕುತ್ತ ಮನೆ ಸೇರಿದರು. ತಂದೆಯ ಮರಣಕ್ಕಾಗಿ ದುಃಖಕ್ಕಿಂತಲೂ ಹೆಚ್ಚಾಗಿ ಆಶ್ಚರ್ಯಪಡುತ್ತ ಶತಪಥ ತಿರುಗುತ್ತ ಅವರು ಅನ್ಯಮನಸ್ಕರಾಗಿ, ದೊಡ್ಡ ಸಮಸ್ಯೆಯೊಂದರಲ್ಲಿ ಸಿಲುಕಿದಂತಿದ್ದರು. ಅಂದು ರಾತ್ರೆ ಅವರಿಗೆ ನಿದ್ರೆಯೇ ಬೀಳಲಿಲ್ಲ. ಕ್ಷಣಕ್ಷಣವೂ ಒಂದೊಂದು ಸಮಸ್ಯೆ ಮನಸ್ಸಿನ ಮುಂದೆ ನಿಂತಂತಿತ್ತು. ಬೆಳಗಿನ ಜಾವಕ್ಕೆನ್ನುವಾಗ ಹೇಗೂ ಅವರಿಗೆ ನಿದ್ರೆ ಹಿಡಿಯಿತು.

ಶಿವಸುಬ್ರಹ್ಮಣ್ಯ ಅಯ್ಯರರು ಬೆಳಗ್ಗೆ ಬೇಗನೆದ್ದು ಡಾ| ಆರೋಗ್ಯಂರವರಲ್ಲಿಗೆ ಬಂದರು. ಡಾಕ್ಟರರು ಪ್ರಸನ್ನವದನರಾದರು. ಅಯ್ಯರರು ಎಲ್ಲ ವಿಚಾರಗಳನ್ನೂ ಸವಿಸ್ತಾರವಾಗಿ ಹೇಳುತ್ತ, ತಮ್ಮಲ್ಲಿದ್ದ ವೀಲ್ ನಾಮೆಯ ಆ ಒಂದು ಪ್ರತಿಯನ್ನೂ ಡಾಕ್ಟರರಿಗೆ ತೋರಿಸುತ್ತ ಅದರಲ್ಲಿದ್ದ ಉಲ್ಲೇಖಗಳನ್ನು ಓದಿ ಹೇಳತೊಡಗಿದರು. ಅದರ ಉಲ್ಲೇಖ ಇಂತಿದ್ದಿತು—

"ಸಿಯಾಲಿ ತಾಲೂಕು ಕಾಟುಮುನಿಯಪ್ಪನ್ ಕೋವಿಲ್‌ನ ನಿವಾಸಿಗಳಾದ, ಮಹದೇವ ಅಯ್ಯರರ ಪುತ್ರರಾದ ಶ್ರೀ ಸಾಂಬಶಿವ ಅಯ್ಯರರು ಬರೆಸಿಟ್ಟ ವೀಲ್‌ನಾಮೆಯ ಕ್ರಮವೆಂತೆಂದರೆ— "ನನ್ನ ಮೊದಲನೆ ಹೆಂಡತಿಯಲ್ಲಿ ಹುಟ್ಟಿದ ನನ್ನ ಹಿರಿಯ ಮಗನು ಚಿಕ್ಕಂದಿನಲ್ಲೇ ಮನೆಬಿಟ್ಟು ಪರಾರಿ

ಯಾಗಿದ್ದಾನೆ. ಅವನು ಮನೆಯಿಂದ ಹೊರಟು ಇಂದಿಗೆ ಮೂವತ್ತು ವರ್ಷಗಳು ಕಳೆದುವು. ಆದರೆ, ಇದು ತನಕವೂ ಅವನ ಸುದ್ದಿಯೇ ತಿಳಿದಿರುವುದಿಲ್ಲ. ನನ್ನ ಎರಡನೇ ಪತ್ನಿಯಲ್ಲಿ ಜನಿಸಿದ ಪುತ್ರನೊಬ್ಬನು ಅಕಾಲ ಮರಣಕ್ಕೆ ತುತ್ತಾದನು. ನನ್ನ ಮೊದಲನೇ ಹೆಂಡತಿಯಲ್ಲಿ ಹುಟ್ಟಿದ ಮಗಳು ಬಾಲಂಬಾಲ ಎಂಬವಳನ್ನು ಶಿವಸುಬ್ರಹ್ಮಣ್ಯ ಅಯ್ಯರ್ ಎಂಬ ಸತ್ಪುರುಷರಿಗೆ ಧಾರೆಯೆರೆದು ಕೊಡಲಾಗಿದೆ. ಅವರು ಗಂಡ-ಹೆಂಡತಿ ಈರ್ವರೂ ಸುಖವಾಗಿರುವರು. ಅವರಿಗೆ ಸುಖ ಸಂಪತ್ತುಗಳಿಗೇನೂ ಕಡಿಮೆಯಿಲ್ಲ. ನನ್ನ, ಈ ಕೆಳಗೆ ವಿವರಗಳನ್ನು ಕೊಡಲ್ಪಟ್ಟಿರುವ ಸಮೃದ್ಧವಾದ ಆಸ್ತಿ ಒಂದು. ಅದು ನನ್ನ ಎರಡನೆಯ ಹೆಂಡತಿಯಾದ ಗೋರಿ ಅಮ್ಮಾಳ್ ಅವಳಿಗೆ ಸೇರತಕ್ಕದ್ದು. ನಾನು ಸಂಪಾದಿಸಿ ಕೂಡಿಸಿಟ್ಟ ಹಣ ಎರಡು ಲಕ್ಷಕ್ಕೂ ಮಿಕ್ಕಿ ಇರುವುದು. ಅದನ್ನು ಈ ಕೆಳಗೆ ನಮೂದಿಸಿದ ಬೇಂಕಿನಲ್ಲಿ ಇಡಲಾಗಿದೆ. ನನ್ನ ಜೀವಿತ ಕಾಲದಲ್ಲಿ ನನ್ನ ಇಚ್ಛಾನುಸಾರವಾಗಿ, ಆದರಿಂದ ತೆಗೆದು ಖರ್ಚುಮಾಡಲು ಹಕ್ಕುಳ್ಳವನಾಗಿದ್ದೇನೆ. ನನ್ನ ಖರ್ಚು ತೆಗೆದು ಮಿಕ್ಕುಳಿದ ಹಣವನ್ನು ನನ್ನ ನಂತರ, ನನ್ನ ಮರಣಕ್ಕೆ ಮೊದಲು, ನನ್ನ ಮಗಳಾದ ಬಾಲಂಬಾಲಳಲ್ಲಿ ಗಂಡು ಮಗು ಹುಟ್ಟಿದ್ದೇ ಆದರೆ, ಅದೆಲ್ಲವೂ ಆ ಮಗನಿಗೆ ಸೇರತಕ್ಕದ್ದು. ನನ್ನ ಜೀವಿತ ಕಾಲದಲ್ಲಿ ಮಗಳಾದ ಬಾಲಂಬಾಲಳಿಗೆ ಗಂಡು ಮಗು ಹುಟ್ಟದಿದ್ದರೆ, ಮನುಸ್ಮೃತಿಯಲ್ಲಿ ಹೇಳಿರುವಂತೆ ನನ್ನ ಉತ್ತರಾಧಿಕಾರಿಯಾದವನಿಗೇ ಸೇರತಕ್ಕದ್ದು. ಅಥವಾ ಒಂದು ವೇಳೆ, ಮನೆಯಿಂದ ಕಾಣೆಯಾಗಿರುವ ನನ್ನ ಹಿರಿಯ ಪುತ್ರನು ಮರಳಿ ಮನೆಗೆ ಬಂದರೆ, ಸರ್ವಾಧಿಕಾರವೂ ಅವನಿಗೇ ಸೇರತಕ್ಕದ್ದು. ಹಾಗೆ ಮರಳಿ ಬಾರದಿದ್ದಲ್ಲಿ, ನನ್ನ ಮರಣದನಂತರ, ನನ್ನ ಸಮೀಪದ ಬಂಧುಗಳಿಗೆ ಸೇರತಕ್ಕುದ್ದಾಗಿದೆ. ಈ ರೀತಿಯಿಂದ ವಿವರಿಸಿದ ಈ ವೀಲ್ ಪತ್ರವು ಈ ಪ್ರಕಾರ, ತಾ.........ರಲ್ಲಿ, ರಿಸಿಜ್ಟ್ರಿ ಮಾಡಲಾಗಿದೆ."

ವೀಲ್ ಪತ್ರವನ್ನು ಓದಿದ ಬಳಿಕ ಡಾ| ಆರೋಗ್ಯಂರವರ ಮುಖ ವಿವರ್ಣವಾಗಿದ್ದಿತು. ಅವರು ನಿಟ್ಟುಸಿರೊಂದನ್ನು ಬಿಟ್ಟು ಮೌನವಾಗಿ ಕುಳಿತಿದ್ದರು. ಶಿವಸುಬ್ರಹ್ಮಣ್ಯ ಅಯ್ಯರರು ಡಾಕ್ಟರರಿಂದ ಬೀಳ್ಕೊಂಡು ತಮ್ಮ ನಿವಾಸಸ್ಥಾನಕ್ಕೆ ತೆರಳಿದರು.

o o o o o

"ಇದ್ದುದೆಲ್ಲವೂ ತಂಗಿಯಾದ ಬಾಲಂವಾಲಳಿಗೂ ಅವಳ ಮಗುವಿಗೂ ಸೇರುವಂತಾಯಿತು. ಅರಿಯದ ಬಾಲಕನಂತೆ ನಾನೆಂತಹ ಮೋಸದಲ್ಲಿ ಬಿದ್ದೆ........ಆದರೂ ನಾನು ಗೆದ್ದಿರುವೆನು. ಇದರಲ್ಲಿ ವ್ಯಥೆಪಡುವುದು ಸರಿಯಲ್ಲ." ಈ ರೀತಿಯಿಂದ ತಮ್ಮ ಮನಸ್ಸನ್ನು ಸ್ಥಿಮಿತದಲ್ಲಿಟ್ಟುಕೊಳ್ಳುತ್ತ ಡಾ| ಆರೋಗ್ಯಂರವರೂ ಸಮಾಧಾನ ತಂದುಕೊಳ್ಳುತ್ತಿದ್ದರು.

ಡಾ| ಪಾಲ್ ಆರೋಗ್ಯಂಅವರು, ಶಾಂತಚಿತ್ತರಾಗಿ ಆ ಮಹಾಗಣಪತಿಯನ್ನು ಪೂಜಿಸಿ, ಶಿರಬಾಗಿ, ಪ್ರಸಾದವನ್ನು ಸ್ವೀಕರಿಸಿದರು. ಆ ತರುವಾಯ ಆ ದಿವ್ಯ ಮೂರ್ತಿಯ ಮುಂದೆ—ಪದ್ಮಾಸನದಲ್ಲಿ ಕುಳಿತು, ಭಕ್ತಿಯಿಂದ ಧ್ಯಾನಮಾಡುತ್ತ ನೈಮರೆತರು.

o o o o o

"ಅಣ್ಣಾ........ಅಣ್ಣಾ........ನೀವು ಬಂದುಬಿಟ್ಟಿರಾ! ಮನೆ ಬಿಟ್ಟು ಮೂವತ್ತು ವರ್ಷಗಳ ನಂತರ ಇಂದು ಬರುತ್ತಿದ್ದೀರಿ. ಇಂದು ನಿಮ್ಮನ್ನು ಕಂಡು, ತಂದೆಯವರನ್ನಗಲಿದ ದುಃಖವನ್ನೂ ಮರೆತುಬಿಟ್ಟಿದ್ದೇನೆ. ಅಣ್ಣಾ! ವೈದ್ಯನಾಥ್! ನೀವು ಈಸಾಯಿ ಧರ್ಮವನ್ನು ಸ್ವೀಕರಿಸಿ ಆ ಜಾತಿಗೆ ಸೇರಿಬಿಟ್ಟಿದ್ದೀರೆಂದು ಕೇಳಿದ್ದೆ....ಅದು ನಿಜವೇನಣ್ಣ!" ಎಂದೆನ್ನುತ್ತ ಡಾ| ಪಾಲ್ ಆರೋಗ್ಯಂರವರ ತಂಗಿ ಬಾಲಂವಾಲಳು ಅಳತೊಡಗಿದಳು. ಡಾ| ಆರೋಗ್ಯಂರವರಿಗೂ ಕಣ್ಣೀರು ಬಂದಿದ್ದಿತು. ಮೂವತ್ತು ವರ್ಷಗಳ ಅನಂತರದ ಆ ಅಣ್ಣತಂಗಿಯರ ಮಿಲನವು ಇಬ್ಬರಲ್ಲಿಯೂ, ಸಂತೋಷವನ್ನೂ ದುಃಖವನ್ನೂ ಒಡಮೂಡಿಸಿದ್ದಿತು. ಡಾ| ಆರೋಗ್ಯಂರವರು ತಂಗಿಯನ್ನು ಸಮಾಧಾನ ಪಡಿಸುತ್ತ ಅಂಗಿಯನ್ನು ತೆಗೆದು ತಮ್ಮ ಜನಿವಾರವನ್ನು ತೋರಿಸಿದರು. "ಬಾಲಾ, ನೀನು ಅಳಬೇಡಮ್ಮ! ಆದದ್ದು ಆಗಿಹೋಯಿತು. ಎಲ್ಲಾ ದೈವಸಂಕಲ್ಪ! ಎರಡು ಲಕ್ಷದ ರಾಶಿಯನ್ನೂ ಆಸ್ತಿಯನ್ನೂ ಬರೀ ಆರು ಸಾವಿರ ರೂಪಾಯಿಗಳಿಗೆ ಮರುಳಾಗಿ, ನಾನು ತೊರೆದು ಬಿಟ್ಟೆ! ನೋಡಮ್ಮ ನಾನು ಎಂತಹ ಹುಚ್ಚ! ಎಂತಹ ಕಡು ಮೂರ್ಖ" ಎಂದೆನ್ನುತ್ತ ಡಾ| ಆರೋಗ್ಯಂರವರು ಗಹಗಹಿಸಿ ನಕ್ಕರು. ಆ ವಿಕಟ ನಗು ಅಲ್ಲೆಲ್ಲ ತುಂಬಿ ಪ್ರತಿಧ್ವನಿಸಿತು!

"ಅಣ್ಣಾ....ನೀವು ಹೇಗೂ ಮನೆಗೆ ಬಂದಿದ್ದೀರಿ. ಇನ್ನು ಆಸ್ತಿಯೆಲ್ಲವನ್ನೂ ನೀವೇ ಇಟ್ಟುಕೊಳ್ಳಿರಿ. ನನಗೆ ಅದರಲ್ಲಿ ಸ್ವಲ್ಪವೂ ಪಶ್ಚಾತ್ತಾಪ

ವಿಲ್ಲ" ಎಂಬುದಾಗಿ ಅಣ್ಣನಿಗೆ ಸಮಾಧಾನ ಹೇಳುತ್ತ ಆ ನಿರ್ಮಲ ಹೃದಯಿಯಾದ ಬಾಲಂಬಾಲಳು ಮಗುವಿಗೆ ಮೊಲೆಯುಣಿಸಲು ಹೊರಟಳು.

"ನಿನಗೇನು ಗೊತ್ತಿದೆ? ಮೂರ್ಖರ ಹಾಗೆ ಮಾತನಾಡುತ್ತಿಯಲ್ಲ! ಅವರು ನಿನ್ನ ಹಣ—ಆಸ್ತಿಗಾಗಿ ಆಸೆಪಟ್ಟುಕೊಂಡು ಬಂದವರಲ್ಲ. ಅವರು ಮಹಾತ್ಮರು, ಸದ್ಗುಣಸಂಪನ್ನರು, ಮಹಾ ತ್ಯಾಗವೀರರು. ಅವರು ತಮ್ಮ ಮುಂದಿನ ಜೀವನವನ್ನು ಶಂಕರಾಚಾರ್ಯರ ಮಠಕ್ಕೆ ತೆರಳಿ ದೇವರ ಧ್ಯಾನದಲ್ಲೇ ಕಳೆಯಬೇಕೆಂದು ನಿಶ್ಚೈಸಿದ್ದಾರೆ. ಇನ್ನು ಅವರು ನಿನ್ನ ಮಾತುಗಳನ್ನು ಕೇಳುತ್ತಾರೆಯೇ?" ಶಿವಸುಬ್ರಹ್ಮಣ್ಯ ಅಯ್ಯರರು ಉದ್ದೇಶಪೂರ್ವಕವಾಗಿ, ಈ ಮಾತುಗಳನ್ನು ತಮ್ಮ ಹೆಂಡತಿಯೊಡನೆ ಹೇಳಿದರು.

ಂ ಂ ಂ ಂ ಂ

ಶಿವಸುಬ್ರಹ್ಮಣ್ಯ ಅಯ್ಯರರು ಹೇಳಿದ ಮಾತು ಸುಳ್ಳಾಗಿರಲಿಲ್ಲ. ಡಾ| ಪಾಲ್ ಆರೋಗ್ಯಂರವರು ತಮ್ಮ ವೇಷಭೂಷಣಗಳನ್ನು ಕೂಡಲೇ ಕಳಚಿ ಬಿಸುಟರು. ಆ ಮೇಲೆ, ಅವರು, ವಿಲಂಬಿಸದೆ ಕುಂಭಕೋಣಕ್ಕೆ ಪ್ರಯಾಣಮಾಡಿದರು. ಅಲ್ಲಿ, ವೈದ್ಯನಾಥ ಅಯ್ಯರ್ ಎಂಬ ಹೆಸರಿನಿಂದ ವೈದಿಕ ಬ್ರಾಹ್ಮಣರ ಸಮೂಹದಲ್ಲಿ ಸೇರಿಕೊಂಡು, ಕರ್ಮಾನುಷ್ಠಾನಗಳಿಂದ ಆಚಾರಶೀಲರಾಗಿ ಶೋಭಿಸುತ್ತ, ತಮ್ಮ ಶೇಷಜೀವನವನ್ನು ಪರಮಾತ್ಮನ ಧ್ಯಾನದಲ್ಲಿ ಕಳೆಯುತ್ತಿದ್ದರು.

Edited, Printed & Published by K. V. Shenoy